ಸಂಪುಟ: 14 Volume | ಸಂಚಿಕೆ: 10 Issue | ಪುಟಗಳು 08 Pages | ಶನಿವಾರ 11 ಏಪ್ರಿಲ್ 2026 | ₹4 | PRGINO.120927 (RNINO: KARKAN/2011/48371) | BDR/054/2026-2027 | mallammanudi@gmail.com | www.mallammanudi.in | 9448604450, 9845028349

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಬಾಳುವಷ್ಟು ಕಾಲವೂ ಕಲಿಯುತ್ತಲೇ ಇರಬೇಕು.
–ತೀ.ನಂ.ಶ್ರೀ.

# ಮಲ್ಲಮ್ಮ ನುಡಿ

ಕನ್ನಡ ಕಿರಣ


Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ | ಪ್ರಧಾನ ಸಂಪಾದಕರು: ಮಾಣಿಕರೆಡ್ಡಿ, ಕೌಡಾಳೆ





ಹುಮನಾಬಾದ ನಗರದ ಮಾಜಿ ಸಚಿವರ ಗೃಹ ಕಛೇರಿಯಲ್ಲಿ ಶುಕ್ರವಾರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಗೈದ ಹುಮನಾಬಾದ ನಗರದ ಬಸವತೀರ್ಥ ವಿದ್ಯಾಪೀಠ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಅಂಕಿತಾ ಗಣಪತಿಗೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಹಾಗೂ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್ ಸನ್ಮಾನಿಸಿ, ಅಭಿನಂದಿಸಿದರು.
(ಮಲ್ಲಮ್ಮ ನುಡಿ ಚಿತ್ರ)



ಹುಮನಾಬಾದ ನಗರದ ಮಾಜಿ ಸಚಿವರ ಗೃಹ ಕಛೇರಿಯಲ್ಲಿ ಶುಕ್ರವಾರ ದ್ವಿತೀಯ ಪಿಯುಸಿ (ಕಲಾ ವಿಭಾಗ) ಪರೀಕ್ಷೆಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ (600/593) ಪಡೆದ ಚಿಟಗುಪ್ಪ ಸರ್ಕಾರಿ ಕನ್ಯಾ ಪ. ಪೂ. ಕಾಲೇಜಿನ ವಿದ್ಯಾರ್ಥಿನಿ ಸೋನಾ ಚಂದ್ರಕಾಂತಗೆ ಮಾಜಿ ಸಚಿವ ರಾಜಶೇಖರ ಪಾಟೀಲ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಡಾ. ಚಂದ್ರಶೇಖರ ಪಾಟೀಲ್, ಪ್ರಮುಖರಾದ ಲಖನ ಕೋಳಿವಾಡ, ಪೀರಪ್ಪ ಉಪಾರ, ಶ್ರೀನಾಥ ದೇವಣಿ, ಅನಿಲಕುಮಾರ ಸಿಂಧೆ, ಕಿರಣ ಹಮೀಲಪೂರಕರ್, ಅಶ್ಫಾಕ ಪಟೇಲ್, ದತ್ತು ಹಲಗೆ ಸೇರಿ ಅನೇಕರಿದ್ದರು. (ಮಲ್ಲಮ್ಮ ನುಡಿ ಚಿತ್ರ)

## ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸನ್ಮಾನ




• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿನಿಯರನ್ನು ಬಸವೇಶ್ವರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶುಕ್ರವಾರ ಪ್ರಾಂಶುಪಾಲ ಡಾ. ಹಣಮಂತ ಪಿ. ಗೌಡಗಾಂವಕರ ಸನ್ಮಾನಿಸಿ ಅಭಿನಂದಿಸಿದರು. ನಂತರ ಗೌಡಗಾಂವಕರ ಮಾತನಾಡಿ, ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ತಾಲ್ಲೂಕಿನ ತಾಳಮಡಗಿ ಗ್ರಾಮದ ಬಸವೇಶ್ವರ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಶೇ. 72.22 ರಷ್ಟು ಫಲಿತಾಂಶ ಲಭಿಸಿದ್ದು ಹೆಮ್ಮೆ ಪಡುವಂತದಾಗಿದೆ. 3 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ,9 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 1 ವಿದ್ಯಾರ್ಥಿನಿ ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ. ಗಾಯತ್ರಿ ಕಾಳಪ್ಪ 554 (ಶೇ.92.33) ರಾಜೇಶ್ವರಿ ರವೀಂದ್ರ 549 (ಶೇ.91.5) ಭುವನೇಶ್ವರಿ ಅಮೃತ 513 (ಶೇ.85.5) ಅಂಕ ಗಳಿಸಿ ಅಗ್ರಶ್ರೇಣಿಯಲ್ಲಿ ಉತ್ತೀರ್ಣರಾಗಿ ನಮ್ಮ ಕಾಲೇಜಿಗೆ ಕೀರ್ತಿ ತಂದಿದ್ದಾರೆ. ವಿದ್ಯಾರ್ಥಿಗಳು ಭವಿಷ್ಯದಲ್ಲಿ ಇನ್ನೂ ಉನ್ನತ ಮಟ್ಟದಲ್ಲಿ ವಿದ್ಯಾಭ್ಯಾಸ ಮಾಡಿ ತಂದೆ ತಾಯಿಗೆ, ಗುರು ಹಿರಿಯರಿಗೆ ಹಾಗೂ ಹುಟ್ಟೂರಿಗೆ ಹೆಚ್ಚು ಕೀರ್ತಿ ತರಲೆಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ರವೀಂದ್ರ ರೆಡ್ಡಿ ಸೇರಿದಂತೆ ವಿದ್ಯಾರ್ಥಿಗಳ ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## 8 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಪಾಸ್



• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತಾಲೂಕಿನ ಕರಡ್ಯಾಳ ಚನ್ನಬಸವೇಶ್ವರ ಗುರುಕುಲ ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳು 2025–26ನೇ ಸಾಲಿನ ದ್ವಿತೀಯ ವಾಣಿಜ್ಯ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ್ದಾರೆ. ವಿದ್ಯಾರ್ಥಿನಿ ಸಾಕ್ಷಿ ನರೇಂದ್ರ 600ಕ್ಕೆ545 ಅಂಕ ಪಡೆದು ಕಾಲೇಜಿಗೆ ಪ್ರಥಮ ಸ್ಥಾನ ಪಡೆದು ಕೊಂಡಿದ್ದಾಳೆ ಎಂದು ಪ್ರಾಚಾರ್ಯ ಸ್ವಪ್ನಾ ಜೋಶಿ ತಿಳಿಸಿದ್ದಾರೆ.

8 ವಿದ್ಯಾರ್ಥಿಗಳು ಅಗ್ರಶ್ರೇಣಿ, 33 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಮತ್ತು 6 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಾರೆ.

ಸಾಧಕರ ವಿವರ :

ಶೃತಿ ನಾಗಶೆಟ್ಟಿ 542, ಸವಿತಾ ಸಂತೋಷ 534, ಸುಜಿತ ರಾಜಕುಮಾರ 532, ಶೃತಿ ಓಂಕಾರ 530, ಆದಿತಿ ಶ್ರೀಶೈಲ 523, ಯೋಗೇಶ ದಯಾನಂದ 516 ಮತ್ತು ವಂದನಾ ದೇವಿದಾಸ 512 ಅಂಕ ಪಡೆದು ಉತ್ತಮ ಸಾಧನೆ ತೋರಿದ್ದಾರೆ ಎಂದು ತಿಳಿಸಿದ್ದಾರೆ.

ಹರ್ಷ :


ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು, ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಪ್ರಾಚಾರ್ಯರಾದ ಬಸವರಾಜ ಮೊಳಕೀರೆ, ಸ್ವಪ್ನಾ ಜೋಶಿ ಹರ್ಷ ವ್ಯಕ್ತ ಪಡಿಸಿದ್ದಾರೆ.

ಕೋಟ್ :–

ವಾಣಿಜ್ಯ ವಿಭಾಗದಲ್ಲಿ 8 ವಿದ್ಯಾರ್ಥಿಗಳು ಅಗ್ರಶ್ರೇಣಿ ಮತ್ತು 33 ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ ಪಾಸಾಗಿರುವುದು ಹೆಮ್ಮೆ ತರಿಸಿದೆ. ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರ ಆಶೀರ್ವಾದ, ಉಪನ್ಯಾಸಕರ ಪರಿಶ್ರಮ ಮತ್ತು ವಿದ್ಯಾರ್ಥಿಗಳ ಪ್ರಯತ್ನದಿಂದ ಈ ಸಾಧನೆ ಸಾಧ್ಯವಾಗಿದೆ.

ಸ್ವಪ್ನಾ ಜೋಶಿ ಪ್ರಾಚಾರ್ಯರು ಚನ್ನಬಸವೇಶ್ವರ ಗುರುಕುಲ ವಾಣಿಜ್ಯ ಕಾಲೇಜು ಕರಡ್ಯಾಳ

## ಚಿನ್ನದ ಪದಕ ಪಡೆದ ಡಿವೈಎಸ್ಪಿ ಬಸವರಾಜ ಅವರಿಗೆ ಸನ್ಮಾನ



• **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ**

ಕಲ್ಬುರ್ಗಿ ಜಿಲ್ಲೆಯಲ್ಲಿ ಡಿವೈಎಸ್ಪಿ ಆಗಿ ಸೇವೆ ಸಲ್ಲಿಸುತ್ತಿರುವ ಕೆ. ಬಸವರಾಜ್ ರವರು ಮುಖ್ಯಮಂತ್ರಿಗಳ ಚಿನ್ನದ ಪದಕ ಪಡೆದ ಪ್ರಯುಕ್ತ ಅವರನ್ನು ತಾಲೂಕಿನ ಟೋಕರಿ ಕೋಳಿ ಸಮಾಜದ ತಾಲೂಕಾಧ್ಯಕ್ಷ ನರಸಪ್ಪ ನರನಾಳ ನೇತೃತ್ವದಲ್ಲಿ ಶುಕ್ರವಾರ ಸನ್ಮಾನಿಸಿ ಶುಭ ಕೋರಿದರು. ಈ ಸಂದರ್ಭದಲ್ಲಿ ಅಶೋಕ ಕಾಗೆ, ವೀರಶೆಟ್ಟಿ ಮಾನಕರ್, ಬಾಬುರಾವ ರಾಸುರೇ, ಪುಂಡಲೀಕ ನಿಂಗನಬಾಡ್, ಫಕೀರಪ್ಪ ಮುಸ್ತರಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ತಾಲೂಕಾಧ್ಯಕ್ಷರಾಗಿ ಹಣಮಂತ ನೇಮಕ



ಮಲ್ಲಮ್ಮ ನುಡಿ ವಾರ್ತೆ ಹುಮನಾಬಾದ

ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಬೀದರ ಜಿಲ್ಲಾಧ್ಯಕ್ಷರಾಗಿ ಪ್ರವೀಣಕುಮಾರ್ ರೇಕುಳಗಿ ಹಾಗೂ ಹುಮನಾಬಾದ ತಾಲೂಕಾಧ್ಯಕ್ಷರಾಗಿ ಹಣಮಂತ ಕಣಜಿಕರ್ ಬೆನಚಿಂಚೋಳಿ ಇವರನ್ನು ಸೊಂತ ಹಾಗೂ ಕಲ್ಮುಡಿನ ಬಾಲಯೋಗಿ ಅಭಿನವ ಶರಣ ಶಂಕರಲಿಂಗ ಮಹಾರಾಜರ ಅಮೃತ ಹಸ್ತದಿಂದ ನೇಮಕಾತಿ ಪತ್ರ ನೀಡಲಾಯಿತು. ಈ ಸಂದರ್ಭದಲ್ಲಿ ರಾಜ್ಯಾಧ್ಯಕ್ಷ ವಾಸುದೇವ ಮೇಟಿ, ಕಲ್ಬುರ್ಗಿ, ಯಾದಗಿರಿ, ಶಹಪುರ್ ಜಿಲ್ಲಾಧ್ಯಕ್ಷರು ಮತ್ತು ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಪ.ಜಾತಿ, ಪ.ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಪಲ್ಲವಿ ಬೀದರ್ ಜಿಲ್ಲಾ ಪ್ರವಾಸ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪಲ್ಲವಿ.ಜಿ. ಅವರು ಏಪ್ರಿಲ್.17 ರಿಂದ 20 ರವರೆಗೆ ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಏಪ್ರಿಲ್.18 ರಂದು ಬೆಳಿಗ್ಗೆ 10.15ಕ್ಕೆ ಬೀದರನ ನೌಬಾದ, ಚೌಳಿ ಕಮಾನ್ ಹತ್ತಿರದಲ್ಲಿ ಪರಿಶಿಷ್ಟ ಜಾತಿಯ ಅಲೆಮಾರಿ ಸಿಂಧೋಳ್ಳು ಮತ್ತು ಮಾಂಗ್‌ಗಾರುಡಿ ಸಮುದಾಯದ ಕುಟುಂಬಗಳು ವಾಸಿಸುತ್ತಿರುವ ಸ್ಥಳ ಜಂಟಿ ವೀಕ್ಷಣೆ ಹಾಗೂ ಕುಂದು ಕೊರತೆಗಳನ್ನು ಆಲಿಸಲಿದ್ದಾರೆ.

ಬೆಳಿಗ್ಗೆ 11.30ಕ್ಕೆ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು, ಜಿಲ್ಲಾದಂಡಾಧಿಕಾರಿಗಳು ಹಾಗೂ ಅಧ್ಯಕ್ಷರು ಜಿಲ್ಲಾ ಅನುಷ್ಠಾನ ಸಮಿತಿ ಬೀದರ ಇವರ ನೇತೃತ್ವದಲ್ಲಿ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಮತ್ತು ಜಿಲ್ಲಾ ಅನುಷ್ಠಾನ ಸಮಿತಿಯ ಸದಸ್ಯರು ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ದಿನಾಂಕ: 19–04–2026 ರಂದು ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ಜಾರಿಯಾದ ವಿವಿಧ ಯೋಜನೆಗಳ ಕುರಿತು ನಡೆದ ಪ್ರಗತಿ ಪರಿಶೀಲನಾ ಸಭೆಯ

ಅನುಪಾಲನೆ ಮತ್ತು ಜಿಲ್ಲಾಡಳಿತಕ್ಕೆ ನಡೆಸಲಾದ ಪತ್ರ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸಮಾಲೋಚನೆ ನಡೆಸಲಿದ್ದಾರೆ. ಮಧ್ಯಾಹ್ನ 1.30 ಕ್ಕೆ ಬೀದರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ಸಂಜೆ 4 ಗಂ–ಟೆಗೆ ಬೀದರ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಭೇಟಿ ನೀಡಲಿದ್ದಾರೆ.

ಏಪ್ರಿಲ್.19 ರಂದು ಬೀದರ ನಗರದಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಏಪ್ರಿಲ್.20 ರಂದು ಬೆಳಿಗ್ಗೆ 10 ರಂದು ಬಸವಕಲ್ಯಾಣದಲ್ಲಿ ನಡೆಯಲಿರುವ ಬಸವ ಜಯಂತಿಯಲ್ಲಿ (ಸ್ಥಳೀಯ ಕಾರ್ಯಕ್ರಮಗಳಲ್ಲಿ) ಭಾಗವಹಿಸಲಿದ್ದಾರೆ. ಮಧ್ಯಾಹ್ನ 2ಕ್ಕೆ ಬೀದರ ಜಿಲ್ಲೆಯಿಂದ ಬೆಂಗಳೂರಿಗೆ ಪ್ರಯಾಣಿಸಲಿದ್ದಾರೆಂದು ಅಧ್ಯಕ್ಷರ ವಿಶೇಷಕರ್ತವ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಏ.14ಕ್ಕೆ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ, ಬೀದರ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಸಮಾಜ ಕಲ್ಯಾಣ ಬೀದರ ಇವರ ಸಂಯುಕ್ತಾಶ್ರಯದಲ್ಲಿ 2026ನೇ ಏಪ್ರಿಲ್.14 ರಂದು ಸಾಯಂಕಾಲ 5 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜಯಂತ್ಯೋತ್ಸವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದ ದಿವ್ಯ ಸಾನಿಧ್ಯ ತೋಂಟದಾರ್ಯ ಮಠ ಮುಂಡರಗಿ ಹಾಗೂ ನಿಷ್ಕಲ ಮಂಟಲ ಬೈಲೂರನ ಪರಮ ಪೂಜ್ಯ ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಮಹಾಸ್ವಾಮಿಗಳು, ಆಣದೂರ ವೈಶಾಲಿ ನಗರ ಬುದ್ಧವಿಹಾರದ ಪೂಜ್ಯ ಭಂತೆ ಜ್ಞಾನಸಾಗರ ಅವರುಗಳು ವಹಿಸಲಿದ್ದಾರೆ.

ಉದ್ಘಾಟನೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಬೀದರ ಜಿಲ್ಲಾ ಉಸ್ತುವಾರಿ ಸಚಿವರಾದ ಈಶ್ವರ ಬಿ.ಖಂಡ್ರೆ ಮಾಡಲಿದ್ದಾರೆ.

ಅಧ್ಯಕ್ಷತೆ ಪೌರಾಡಳಿತ ಹಾಗೂ ಹಜ್ ಸಚಿವರಾದ ರಹೀಂ ಖಾನ್ ಅವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬೀದರ ಲೋಕಸಭಾ ಸಂಸದರಾದ ಸಾಗರ ಈಶ್ವರ ಖಂಡ್ರೆ, ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಮಾಲಾ ಬಿ.ನಾರಾಯಣರಾವ, ಔರಾದ(ಬಿ) ಶಾಸಕ ಪ್ರಭು ಬಿ.ಚವ್ಹಾಣ, ಬಸವಕಲ್ಯಾಣ ಶಾಸಕ ಶರಣು ಸಲಗರ, ಬೀದರ ದಕ್ಷಿಣ ಶಾಸಕ ಡಾ.ಶೈಲೇಂದ್ರ ಕೆ.ಬೆಲ್ದಾಳೆ, ಹುಮನಾಬಾದ ಶಾಸಕ ಡಾ.ಸಿದ್ದಲಿಂಗಪ್ಪ ಎನ್.ಪಾಟೀಲ್, ವಿಧಾನ ಪರಿಷತ್ ಶಾಸಕರುಗಳಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ ಜಿ.ನಮೋಶಿ,

ಭೀಮರಾವ ಬಿ.ಪಾಟೀಲ, ಡಾ.ಎಂ.ಜಿ.ಮೂಳೆ ಮತ್ತು ಅಧ್ಯಕ್ಷರು ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣ ಮೇಲ್ದಂಡೆ ಯೋಜನೆ (ಕಾಡಾ) ಭೀಮರಾಯನಗುಡಿ ಕಲಬುರಗಿಯ ಬಾಬು ಹೊನ್ನನಾಯ್ಕ, ಬೀದರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ, ಬೀದರ ಮಹಾನಗರ ಪಾಲಿಕೆಯ ಅಧ್ಯಕ್ಷ ಮಹಮ್ಮದ ಗೌಸ ಅವರುಗಳು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ರಾಷ್ಟ್ರೀಯ ಬುಡಕಟ್ಟು ಸ್ವಾಯತ್ತ ಮಂಡಳಿ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯಕಾರಿ ಅಧ್ಯಕ್ಷ ಪ್ರೇಮಕುಮಾರ ಗೆದ್ದಂ ಹಾಗೂ ಬೆಂಗಳೂರು ಕರ್ನಾಟಕ ಉಚ್ಚನ್ಯಾಯಾಲಯದ ನ್ಯಾಯವಾದಿ ಪ್ರೊ.ಹರಿರಾಮ ಎ. ಅವರುಗಳು ನೀಡಲಿದ್ದಾರೆ.

## ಸಂಪಾದಕೀಯ



**ಮಾಣಿಕರೆಡ್ಡಿ ಕೌಡಾಳೆ**
ಪ್ರಧಾನ ಸಂಪಾದಕರು
ಮೋ: 9845028349

### ಯುವಕರು ರಾಜಕಾರಣಕ್ಕೆ ಬರಬೇಕು ಎಂಬುದು ಇಂದಿನ ಸಮಾಜದ ಪ್ರಮುಖ ಅಗತ್ಯವಾಗಿದೆ

ದೇಶದ ಭವಿಷ್ಯ ಯುವಕರ ಕೈಯಲ್ಲಿದೆ ಎನ್ನುವುದು ನಿಜ. ಆದರೆ ರಾಜಕೀಯ ಕ್ಷೇತ್ರದಲ್ಲಿ ಯುವಕರ ಭಾಗವಹಿಸುವಿಕೆ ಕಡಿಮೆ ಕಾಣುತ್ತಿರುವುದು ವಿಷಾದಕರ ಸಂಗತಿ.

ಯುವಕರು ಹೊಸ ಆಲೋಚನೆಗಳು, ಉತ್ಸಾಹ ಮತ್ತು ನಿಷ್ಠೆಯಿಂದ ಕೆಲಸ ಮಾಡುವ ಸಾಮರ್ಥ್ಯ ಹೊಂದಿದ್ದಾರೆ. ಅವರಲ್ಲಿ ಸಮಾಜದ ಸಮಸ್ಯೆಗಳ ಬಗ್ಗೆ ಸೂಕ್ಷ್ಮ ಅರಿವು ಇರುತ್ತದೆ. ಇಂತಹ ಯುವಕರು ರಾಜಕೀಯಕ್ಕೆ ಬಂದರೆ ಆಡಳಿತದಲ್ಲಿ ಪಾರದರ್ಶಕತೆ, ಅಭಿವೃದ್ಧಿ ಮತ್ತು ಜನಪರ ನೀತಿಗಳು ಹೆಚ್ಚು ಪರಿಣಾಮಕಾರಿಯಾಗಿ ಜಾರಿಯಾಗಬಹುದು.

ಇಂದು ರಾಜಕೀಯವನ್ನು ಕೆಲವರು ಸ್ವಾರ್ಥದ ಸಾಧನವಾಗಿ ಬಳಸುತ್ತಿರುವ ಸಂದರ್ಭದಲ್ಲಿಯೇ, ಸತ್ಯನಿಷ್ಠೆಯುಳ್ಳ ಯುವಕರು ಮುಂದೆ ಬರಬೇಕು.

ಶಿಕ್ಷಣ ಪಡೆದ, ಸಮಾಜಮುಖಿ ಮನೋಭಾವ ಹೊಂದಿರುವ ಯುವಕರು ರಾಜಕೀಯದಲ್ಲಿ ತೊಡಗಿಸಿಕೊಂಡರೆ ದೇಶದ ಪ್ರಗತಿಗೆ ಹೊಸ ದಿಕ್ಕು ಸಿಗುತ್ತದೆ.

ಯುವಕರು ರಾಜಕೀಯದಿಂದ ದೂರ ಉಳಿಯುವ ಬದಲು, ಅದರಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಮತದಾನ ಮಾತ್ರವಲ್ಲದೆ, ನಾಯಕತ್ವ ವಹಿಸುವ ಧೈರ್ಯವನ್ನು ತೋರಬೇಕು. ಜನರ ಸಮಸ್ಯೆಗಳನ್ನು ನೇರವಾಗಿ ಅರ್ಥಮಾಡಿಕೊಂಡು, ಅವುಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯುವಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದಾಗಿದೆ.

ಆದ್ದರಿಂದ, “ಯುವಕರು ರಾಜಕಾರಣಕ್ಕೆ ಬರಬೇಕು” ಎಂಬುದು ಕೇವಲ ಘೋಷಣೆ ಆಗದೆ, ಒಂದು ಚಳವಳಿಯಾಗಿ ರೂಪುಗೊಳ್ಳಬೇಕು.

ಯುವಕರಿಂದಲೇ ಶುದ್ಧ, ಸದೃಢ ಮತ್ತು ಜನಪರ ರಾಜಕೀಯ ಸಾಧ್ಯ.

## ಭಗತ್ ಸಿಂಗ್ ಕಾಲೇಜಿಗೆ ಶೇ.92 ರಷ್ಟು ಫಲಿತಾಂಶ



• **ಮಲ್ಲಮ್ಮ ನುಡಿ ವಾರ್ತೆ, ಹುಮನಾಬಾದ**

ಪಟ್ಟಣದ ಭಗತ್‌ಸಿಂಗ್ ವಿಜ್ಞಾನ ಪದವಿಪೂರ್ವ ದ್ವಿತೀಯ ವರ್ಷದ ಪರೀಕ್ಷೆಯಲ್ಲಿ 92 ರಷ್ಟು ಫಲಿತಾಂಶ ಬಂದಿದೆ. ಈ ಕಾಲೇಜಿನ 75 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಇದರಲ್ಲಿ 69 ವಿದ್ಯಾರ್ಥಿಗಳು ಉತ್ತೀರ್ಣಗೊಂಡಿದ್ದಾರೆ. ನಾಲ್ಕು ವಿದ್ಯಾರ್ಥಿಗಳು ಅಗ್ರಶ್ರೇಣಿಯಲ್ಲಿ 49 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣಗೊಂಡಿದ್ದಾರೆ. ಈ ಸಾಧನೆಗೆ ಗೋಖಲೆ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಂಕುಶ ಗೋಖಲೆ ರವರು ಅಭಿನಂದನೆ ಸಲ್ಲಿಸಿ ಹರ್ಷವ್ಯಕ್ತಪಡಿಸಿದ್ದಾರೆ. ಅಗ್ರಶ್ರೇಣಿಯಲ್ಲಿ ಉತ್ತೀರ್ಣಗೊಂಡ ಮೂವರು ವಿದ್ಯಾರ್ಥಿಗಳು ಈ ರೀತಿಯಾಗಿದ್ದಾರೆ. ಅಂಕಿತ ವೀರಯ್ಯ 90.33% ಶೇ. ರಷ್ಟು ಅಂಕ ಪಡೆದ್ದಿದ್ದಾರೆ. ನಂದಿನಿ ಚಂದ್ರಕಾಂತ್ 88.83 % ಶೇ ರಷ್ಟು ಅಂಕ ಪಡೆದಿದ್ದಾರೆ. ನಾಗೇಶ್ವರಿ ವೈಜಿನಾಥ 86.66 % ಶೇ. ರಷ್ಟು ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದಕ್ಕೆ ಕಾಲೇಜಿನ ಪ್ರಾಚಾರ್ಯ ರವೀಂದ್ರರೆಡ್ಡಿ, ಆಡಳಿತಾಧಿಕಾರಿ ಪ್ರೇಮ್ ರವರು ಹರ್ಷ ವ್ಯಕ್ತಪಡಿಸಿ ವಿದ್ಯಾರ್ಥಿಗಳಿಗೆ ಅಭಿನಂದಿಸಿದ್ದಾರೆ.

## ಸರ್ಕಾರಿ ಪಿಯು ಕಾಲೇಜಿನ 8 ವಿದ್ಯಾರ್ಥಿ ಅಗ್ರ ಶ್ರೇಣಿಯಲ್ಲಿ ಪಾಸ್

• **ಮಲ್ಲಮ್ಮ ನುಡಿ ವಾರ್ತೆ, ಭಾಲ್ಕಿ**

ತಾಲ್ಲೂಕಿನ ಹಲಬರ್ಗಾ ಗ್ರಾಮದ ಸರ್ಕಾರಿ ಪಿಯು ಕಾಲೇಜಿನ ಎಂಟು ವಿದ್ಯಾರ್ಥಿಗಳು ಪಿಯು ಪರೀಕ್ಷೆಯಲ್ಲಿ ಅಗ್ರ ಶ್ರೇಣಿಯಲ್ಲಿ ಪಾಸಾಗಿ ಉತ್ತಮ ಸಾಧನೆ ತೋರಿದ್ದಾರೆ ಎಂದು ಪ್ರಾಚಾರ್ಯ ಭಗವಾನ್ ಬಿರಾದರ ತಿಳಿಸಿದ್ದಾರೆ.

ಪ್ರಿಯಾಂಕಾ ಲಕ್ಷ್ಮಣ ಶೇ.94.16, ರೇಷ್ಮಾ ನಾಮದೇವ 92.5, ಕೀರ್ತಿ ಪ್ರೇಮ 91.66, ಯಾಸೀನ್ ಎಂ.ಡಿ. ಗೌಸೋದ್ದಿನ್ 90.33,

ವಿದ್ಯಾರಾಣಿ ರಮೇಶ 87.8, ಸಾರಿಕಾ ದತ್ತಾತ್ರಿ 86.5, ಗುಂಡುಮಣಿ ದೇವರಾಜ 85.8, ರೇಷ್ಮಾ ಶರಿಪೋದ್ದಿನ್ 85.85 ಪ್ರತಿಶತ ಅಂಕ ಪಡೆದು ಅಗ್ರ ಶ್ರೇಣಿಯಲ್ಲಿ ಪಾಸಾಗಿದ್ದಾರೆ.ಪರೀಕ್ಷೆ ಹಾಜರಾದ ಒಟ್ಟು 44 ವಿದ್ಯಾರ್ಥಿಗಳಲ್ಲಿ 38 ವಿದ್ಯಾರ್ಥಿಗಳು ಪಾಸಾಗಿದ್ದು, ಕಾಲೇಜಿನ ಫಲಿತಾಂಶ ಶೇ. 86.36 ಆಗಿದೆ ಎಂದು ತಿಳಿಸಿದರು.

## ಇಂದಿನಿಂದ ನಾಮಪತ್ರ ಸಲ್ಲಿಕೆ

• **ಮಲ್ಲಮ್ಮ ನುಡಿ ವಾರ್ತೆ, ಚಿಟಗುಪ್ಪ**

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ 2026 ರಿಂದ 2031ರ ಅವಧಿಗಾಗಿ ತಾಲೂಕ ಪದಾಧಿಕಾರಿಗಳ ಚುನಾವಣೆ ನಡೆಯಲ್ಲಿದ್ದು. ಏಪ್ರಿಲ್ 11ರಿಂದ 12ರ ವರೆಗೆ ಬೆಳಿಗ್ಗೆ 11ರಿಂದ ಸಂಜೆ 6ರ ವರೆಗೆ ಚಿಟಗುಪ್ಪ ಸರ್ಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ನಾಮಪತ್ರ ಸಲ್ಲಿಸುವುದು. ಏಪ್ರಿಲ್ 13ರಂದು ಬೆಳಿಗ್ಗೆ 11:30ಕ್ಕೆ ನಾಮಪತ್ರ ಪರಿಶೀಲನೆ. 14ರಂದು ಬೆಳಿಗ್ಗೆ 11ರಿಂದ ಸಂಜೆ 6ರ ವರೆಗೆ ನಾಮಪತ್ರ ವಾಪಾಸ್ ಪಡೆದುಕೊಳ್ಳುವುದು. 19ರಂದು ಬೆಳಿಗ್ಗೆ 8:30ರಿಂದ 4:30 ರ ವರೆಗೆ ಮತದಾನ ಮಾಡುವುದು. ನಂತರ ಮತದಾನ ಪ್ರಕ್ರಿಯೆ ನಡೆಯಿಸಿ ಅಂದೇ ಫಲಿತಾಂಶ ಪ್ರಕಟಿಸಲಾಗುವುದೆಂದು ಚುನಾವಣಾಧಿಕಾರಿ ರತ್ನಪ್ಪ ತಿಳಿಸಿದ್ದಾರೆ.

# ಬಸವನ ನಾಡಲ್ಲಿ ಸುದ್ದಿ ಮನೆ ಪತ್ರಕರ್ತರದ್ದೇ ಸದ್ದು: ಸಮ್ಮೇಳನಕ್ಕೆ ಸಜ್ಜಾದ ಜಿಲ್ಲೆ

## ಮಾದರಿ ಸಮ್ಮೇಳನಕ್ಕೆ ಸರ್ವ ಪ್ರಯತ್ನ

ಬೀದರ್: ಬೀದರ್‌ನಲ್ಲಿ ನಡೆಯುವ ಪತ್ರಕರ್ತರ ರಾಜ್ಯ ಸಮ್ಮೇಳನವನ್ನು ಮಾದರಿ ಆಗಿಸುವ ದಿಸೆಯಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರು ಸಂಘವು ಜಿಲ್ಲೆಯ ಎಲ್ಲ ಪತ್ರಕರ್ತರ ಜತಗೂಡಿ ಶಕ್ತಿ ಮೀರಿ ಪ್ರಯತ್ನಿಸುತ್ತಿದೆ ಎಂದು ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ ತಿಳಿಸಿದರು.

ರಾಜ್ಯದ ವಿವಿಧೆಡೆಯಿಂದ ಬರುವ ಪತ್ರಕರ್ತರಿಗೆಯಾವುದೇ ತೊಂದರೆ ಆಗದ ರೀತಿಯಲ್ಲಿ ಸಿದ್ಧತೆಗಳನ್ನುಮಾಡಿಕೊಳ್ಳಲಾಗಿದೆ. ಸಮ್ಮೇಳನದಲ್ಲಿ ನೋಂದಣಿ ಸೇರಿ 22 ಮಳಿಗೆಗಳು ಇರಲಿವೆ ಎಂದು ಹೇಳಿದರು.




• ಮಲ್ಲಮ್ಮ ನುಡಿ ವಾರ್ತೆ, ಬೀದರ್

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಎರಡು ದಿನಗಳ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ಬಸವಾದಿ ಶರಣರ ಕರ್ಮಭೂಮಿ, ಸೂಫಿ–ಸಂತರ ನಾಡು ಬೀದರ್ ಅಣಿಯಾಗಿದೆ.ಸಮ್ಮೇಳನ ಸ್ಥಳವಾದ ನಗರದ ಝೀರಾ ಕನ್ವೆನ್ಶನ್ ಹಾಲ್‌ನಲ್ಲಿ ಪ್ರಧಾನ ವೇದಿಕೆ, ನೋಂದಣಿ, ಪ್ರದರ್ಶನ ಮಳಿಗೆಗಳು, ಪತ್ರಕರ್ತರಿಗೆ ಊಟ, ಕುಡಿಯುವ ನೀರು ಸೇರಿದಂತೆ ಎಲ್ಲ ಸಿದ್ಧತೆಗಳು ಪೂರ್ಣಗೊಂಡಿವೆ.

ಹಿರಿಯರು ಹಾಗೂ ಮಾಜಿ ಜಿಲ್ಲಾ ಅಧ್ಯಕ್ಷರ ಸಲಹಾ ಸಮಿತಿ, ಸಮ್ಮೇಳನ ಪೋಷಕರು, ವಸತಿ, ಆಹಾರ, ಸಾರಿಗೆ, ಪ್ರಚಾರ, ಮೆರವಣಿಗೆ, ಪ್ರತಿನಿಧಿಗಳ ನೋಂದಣಿ– ಕಿಟ್ ವಿತರಣೆ, ಛಾಯಾಚಿತ್ರ ಪ್ರದರ್ಶನ, ವಸ್ತು ಪ್ರದರ್ಶನ–ಮಾರಾಟ ಮಳಿಗೆ, ಸಾಂಸ್ಕೃತಿಕ, ಮಹಿಳಾ, ಆರೋಗ್ಯ, ಅತಿಥಿ ಸತ್ಕಾರ, ಸ್ಮರಣ ಸಂಚಿಕೆ ಮುದ್ರಣ, ಪ್ರವಾಸ ಹಾಗೂ ಶಿಸ್ತು ಪಾಲನೆ ಮತ್ತು ಸ್ವಯಂ ಸೇವಕರ ಸಮಿತಿಗಳು ಅರ್ಥಪೂರ್ಣ ಸಮ್ಮೇಳನಕ್ಕೆ ಅಗತ್ಯ ತಯಾರಿ ಮಾಡಿಕೊಂಡಿವೆ.

ಸಮ್ಮೇಳನ ನಿಮಿತ್ತ ನಗರದಲ್ಲಿ ಹಬ್ಬದ ವಾತಾವರಣ ಸೃಷ್ಟಿಯಾಗಿದೆ. ಎಲ್ಲೆಡೆ ಸಮ್ಮೇಳಕ್ಕೆ ಸ್ವಾಗತ ಕೋರುವ ಕಟೌಟ್, ಬ್ಯಾನ□□ಗಳು ರಾರಾಜಿಸುತ್ತಿವೆ. ಪತ್ರಕರ್ತರಲ್ಲಿ



ಸಡಗರ, ಸಂಭ್ರಮ ಮನೆ ಮಾಡಿದೆ.

### ಮುಖ್ಯಮಂತ್ರಿಯಿಂದ ಸಮ್ಮೇಳನ ಉದ್ಘಾಟನೆ

ಬೀದರ್: ಪತ್ರಕರ್ತರ ರಾಜ್ಯ ಸಮ್ಮೇಳನಕ್ಕೆ ನಗರದ ಝೀರಾ ಕನ್ವೆನ್ಶನ್ ಹಾಲ್‌ನ ಲೋಕನಾಯಕ ಡಾ. ಭೀಮಣ್ಣ ಖಂಡ್ರೆ ವೇದಿಕೆಯಲ್ಲಿ ಶನಿವಾರ ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ವಸ್ತು ಪ್ರದರ್ಶನ ಉದ್ಘಾಟಿಸಲಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. ಪೌರಾಡಳಿತ ಹಾಗೂ ಹಜ್ ಸಚಿವ ರಹೀಂಖಾನ್ ಛಾಯಾಚಿತ್ರ ಪ್ರದರ್ಶನ, ಸಂಸದ ಸಾಗರ್ ಖಂಡ್ರೆ ವ್ಯಂಗ್ಯ ಚಿತ್ರ ಪ್ರದರ್ಶನಕ್ಕೆ ಚಾಲನೆ ನೀಡಲಿದ್ದಾರೆ.ಹಾರಕೂಡದ ಚನ್ನವೀರ ಶಿವಾಚಾರ್ಯರು ಹಾಗೂ ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು ಸಾನಿಧ್ಯ ವಹಿಸಲಿದ್ದಾರೆ. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ, ಮಾಜಿ ಸಚಿವ ರಾಜಶೇಖರ ಪಾಟೀಲ ಘನ ಉಪಸ್ಥಿತಿ ವಹಿಸಲಿದ್ದಾರೆ.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ ಮೊದಲ ಮಾತು ಆಡಲಿದ್ದಾರೆ. ಪತ್ರಕರ್ತ ವಿಶ್ವೇಶ್ವರ ಭಟ್ ಪ್ರಧಾನ ಭಾಷಣ ಮಾಡಲಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಡಾ. ಚಂದ್ರಶೇಖರ ಪಾಟೀಲ, ಭೀಮರಾವ್ ಪಾಟೀಲ, ಶಾಸಕ ಶರಣು ಸಲಗರ, ಬಿಡಿಎ ಅಧ್ಯಕ್ಷ ಬಸವರಾಜ ಜಾಬಶೆಟ್ಟಿ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮಾಜಿ ಶಾಸಕ ಅಶೋಕ ಖೇಣಿ, ಶಾಹೀನ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಡಾ. ಅಬ್ದುಲ್ ಖದೀರ್, ಗುರುದ್ವಾರ ಪ್ರಬಂಧಕ ಕಮಿಟಿ ಅಧ್ಯಕ್ಷ ಡಾ. ಬಲಬೀರಸಿಂಗ್, ಮುಖಂಡ ಗುರುನಾಥ ಕೊಳ್ಳೂರ ವಿಶೇಷ ಆಹ್ವಾನಿತರಾಗಿರುವರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗಿರೀಶ್ ಬದೋಲೆ, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಲೋಕೇಶ್, ಜಿಲ್ಲಾ ಅಡಾಕ್ ಕಮಿಟಿ ಸದಸ್ಯರಾದ ಅಪ್ಪರಾವ್ ಸೌದಿ ಹಾಗೂ ಶಿವಕುಮಾರ ಸ್ವಾಮಿ ಉಪಸ್ಥಿತರಿರುವರು.ಮಧ್ಯಾಹ್ನ 2ಕ್ಕೆ ಗಾಂಧಿ–ಅಂಬೇಡ್ಕರ್ ಹಾಗೂ ಪತ್ರಿಕೋದ್ಯಮ ಗೋಷ್ಠಿ, ಮಧ್ಯಾಹ್ನ 3.30ಕ್ಕೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮತ್ತು ಮಾಧ್ಯಮ ಗೋಷ್ಠಿ, ಸಂಜೆ 5ಕ್ಕೆ ಗಡಿ ಸಮಸ್ಯೆಗಳು ಸಂವಾದ, ಸಂಜೆ 5.30ಕ್ಕೆ ಮಾಧ್ಯಮ ಮತ್ತು ಉದ್ಯಮ ಉಪನ್ಯಾಸ ನಡೆಯಲಿದೆ.

### ಸಮ್ಮೇಳನಕ್ಕೆ ರಾಜ್ಯದ ಎಲ್ಲ ಜಿಲ್ಲೆಗಳ ಪತ್ರಕರ್ತರು

ಬೀದರ್: ಪತ್ರಕರ್ತರ ಮಹಾ ಸಂಗಮವಾಗಲಿರುವ ಪತ್ರಕರ್ತರ ರಾಜ್ಯ ಸಮ್ಮೇಳನದಲ್ಲಿ ರಾಜ್ಯದ ಎಲ್ಲ ಜಿಲ್ಲೆಗಳ ಪತ್ರಕರ್ತರು ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದರು.

ಬಹುತೇಕ ಪತ್ರಕರ್ತರು ಎರಡು ದಿನ ನಡೆಯಲಿರುವ ವಿವಿಧ ಗೋಷ್ಠಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ. ಅನೇಕರು ಒಂದು ದಿನ ಬಂದು ಹೋಗಲಿದ್ದಾರೆ.

ಒಟ್ಟಾರೆ ಐದು ಸಾವಿರಕ್ಕೂ ಹೆಚ್ಚು ಪತ್ರಕರ್ತರು ಸಮ್ಮೇಳನದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ ಎಂದು ಹೇಳಿದರು.

ಸಮ್ಮೇಳನಕ್ಕೆ ಆಗಮಿಸುವ ಪತ್ರಕರ್ತರಿಗೆ ವಸತಿ, ಸಾರಿಗೆ, ಆಹಾರ ಸೇರಿದಂತೆ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ. ಸಮ್ಮೇಳನ ಅಂಗವಾಗಿ ನಾಲ್ಕು ಗೋಷ್ಠಿಗಳು ನಡೆಯಲಿವೆ ಎಂದು ತಿಳಿಸಿದರು.

11 ರಂದು ಬೆಳಿಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಇದಕ್ಕೂ ಮುನ್ನ ಬೆಳಿಗ್ಗೆ 9ಕ್ಕೆ ಬಸವೇಶ್ವರ ವೃತ್ತದಿಂದ ಸಮ್ಮೇಳನ ಸ್ಥಳ ಝೀರಾ ಕನ್ವೆನ್ಶನ್ ಹಾಲ್‌ವರೆಗೆ ಭವ್ಯ ಮೆರವಣಿಗೆ ಜರುಗಲಿದೆ. 40ನೇ ಸಮ್ಮೇಳನದ ಸವಿನೆನಪಿಗಾಗಿ

ಮೆರವಣಿಗೆಯಲ್ಲಿ 40 ಬೃಹತ್ ಕೊಡೆಗಳು ಇರಲಿವೆ. ವಿವಿಧ ಕಲಾ ತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಲಿವೆ ಎಂದು ಹೇಳಿದರು.

## ಅಕ್ರಮ ಮದ್ಯ ಮಾರಾಟ ತಡೆಗೆ ಮನವಿ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ

ತಾಲೂಕಿನ ಗ್ರಾಮೀಣ ಪ್ರದೇಶಗಳಲ್ಲಿ ಅಕ್ರಮ ಮದ್ಯ ಮಾರಾಟದಿಂದ ಸಮಾಜದ ಮೇಲೆ ದುಷ್ಪಪರಿಣಾಮ ಬೀರುತ್ತಿದೆ ಎಂದು.

ಇಲ್ಲಿನ ಬಹುಜನ ಸಮಾಜ ಪಕ್ಷದವತಿಯಿಂದ ಅಬಕಾರಿ ಇಲಾಖೆಯ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು. ತಾಲೂಕಿನ ಗ್ರಾಮೀಣ ಪ್ರದೇಶಗಳಾದ ಕಿಟ್ಟಾ. ಹಾರಕೂಡ, ಗೋಕುಳ, ಪ್ರತಾಪೂರ, ಮುಡಬಿ, ಹಾಗೂ ಎಲ್ಲಾ ಗ್ರಾಮಗಳಲ್ಲಿ ಕಿರಾಣಾ ಅಂಗಡಿಗಳಲ್ಲಿ. ಪಾನ ಡಬ್ಬಾಗಳಲ್ಲಿ ಹಾಗೂ ಸಾರ್ವಜನಿಕ ಜಾಗಗಳಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ. ಇದರಿಂದ ಬಡ ಜನರ ಜೀವನ ನರಕವಾಗುತ್ತಿದೆ ಎಂದರು. ಈಬಾಗದ ಕಾಲೇಜು ವಿದ್ಯಾಥಿಗಳು, ದಿನಗೂಲಿ ಕಾರ್ಮಿಕರು ಮತ್ತು ಬಡ ಕುಟುಂಬಗಳಿಗೆ ಬಹಳಷ್ಟು ತೊಂದರೆ ಅನುಭವಿಸುವಂತಾಗಿದೆ. ಅಕ್ರಮ ಮದ್ಯದ ಲಭ್ಯತೆಯಿಂದ ಯುವಕರು ದುಷ್ಕೃವೃತ್ತಿಗಳ ಕಡೆಗೆ ಆಕರ್ಷಿತರಾಗಿ ತಮ್ಮ ಶಿಕ್ಷಣ ಮತ್ತು ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ.

ಇದರಿಂದ ಕುಟುಂಬಗಳಲ್ಲಿ ಕಲಹಗಳು, ಆರ್ಥಿಕ ಸಂಕಷ್ಟಗಳು ಹೆಚ್ಚುತ್ತಿದ್ದು ಮಹಿಳೆಯರು ಮತ್ತು ಮಕ್ಕಳ ಮೇಲೆ ದುಷ್ಪರಿಣಾಮ ಬೀರುತ್ತಿದೆ.

ಆದ್ದರಿಂದ, ಆದಷ್ಟು ಬೇಗ ಸಮಸ್ಯೆಯನ್ನು ಬಗೆಹರಿಸಬೇಕು ತಾಲೂಕಿನ ವಿವಿಧ ಭಾಗಗಳಲ್ಲಿ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟ ಬೇಕು ಒಂದು ವೇಳೆ ಅಕ್ರಮ ಮದ್ಯ ಮಾರಾಟವನ್ನು ತಡೆಗಟ್ಟದೆ ಹೋದರೆ ಸಂಬಂಧ ಪಟ್ಟ ಅಧಿಕಾರಿಗಳ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಬಹುಜನ ಸಮಾಜ ಪಕ್ಷದ ತಾಲ್ಲೂಕು ಅಧ್ಯಕ್ಷರಾದ ಶಂಕರ್ ಫುಲೆ. ಉಪಾಧ್ಯಕ್ಷರಾದ ರಮೇಶ ರಾಠೋಡ. ಸಚಿನ ಕಾಂಬಳೆ. ಪ್ರಧಾನ ಕಾರ್ಯದರ್ಶಿಗಳಾದ ರವಿ ಉದಾತೆ. ಮಸ್ತಾಸಾಬ ಲದಾಫ್. ಮಾರುತಿ ಮೇಕಾಲೆ. ಮಹಾದೇವ ಗಾಯಕವಾಡ. ದೀಲಿಪ ಶಿರೋಳೆ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

## ಶಕ್ತಿ ದೇವತೆ ರಕ್ಕಸಮ್ಮ ತಾಯಿಯ 52ನೇ ವರ್ಷದ ವಾರ್ಷಿಕೋತ್ಸವ ಅದ್ದೂರಿ ಪೂಜಾ ಮಹೋತ್ಸವ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದ 20ನೇ ವಾರ್ಡಿನ ನಾಲ್ ಬಂದ್ ಮೊಹಲ್ಲ ಶಿವ ಜ್ಯೋತಿ ನಗರದ ಶಂಕರ್ ಮಠ ಹತ್ತಿರ ಮುಖ್ಯ ರಸ್ತೆ ಶ್ರೀ ಶಕ್ತಿ ದೇವತೆ ರಕ್ಕಸಮ್ಮ ತಾಯಿಯ 52ನೇ ವರ್ಷದ ವಾರ್ಷಿಕೋತ್ಸವದ ಅದ್ದೂರಿಯಾಗಿ ಪೂಜಾ ಮಹೋತ್ಸವ ಮಾಜಿ ಶಾಸಕ ಹಾಗೂ ಸ್ನೇಹಜೀವಿ ಎಸ್ ಪಿ ಮಂಜುನಾಥ್ ಭಾಗವಹಿಸಿ ಪೂಜೆ ಸಲ್ಲಿಸಿ ತಾಯಿ ಆಶೀರ್ವಾದ ಪಡೆದರು

ನಂತರ ನಗರದ ಸ್ಥಳೀಯ ನಿವಾಸಿಗಳು ಹಾಗೂ ಭಕ್ತಾದಿಗಳು ಅಭಿಮಾನಿಗಳು ಕಾರ್ಯಕರ್ತರು ಒಗ್ಗಟ್ಟಿನ ಪ್ರದರ್ಶನ ಮಾಡಿ ಮಾಜಿ ಶಾಸಕ ಎಚ್ ಪಿ ಮಂಜುನಾಥ್ ರವರನ್ನು ಗಾಣಿಗ ಸಮುದಾಯದ ಮುಖಂಡರು ಯುವಕರು ಸೇರಿ ಸನ್ಮಾನಿಸಿ ಗೌರವಿಸಲಾಯಿತು ನಂತರ ಹೆಗಲಿನ ಮೇಲೆ ಎತ್ತಿ ಕೊಂ□□□□ ಕುಣಿದು ಕುಪ್ಪಳಿಸಿ ಸಂತೋಷ ವ್ಯಕ್ತಪಡಿಸಿದರು

ಕಾರ್ಯಕ್ರಮಕ್ಕೆ ನಗರದ ಸ್ಥಳೀಯರು ಜೊತೆಗೂಡಿ ಬಹಳ ಅದ್ದೂರಿಯಾಗಿ ಹಬ್ಬವನ್ನು ಆಚರಿಸಲಾಯಿತು ಹಾಗೂ ಅನ್ನ ಸಂತರ್ಪಣೆ ಭಕ್ತಾದಿಗಳಿಗೆ ದಾಸೋಸ್ತ ಬಡಿಸಲಾಯಿತು

ಈ ಸಂದರ್ಭದಲ್ಲಿ ದೇವಸ್ಥಾನದ ಸಮಿತಿ ಮುಖಂಡರಿಗೆ ಮುಖ್ಯಸ್ಥರಾದ ಇಂಟಕ್ ರಾಜು ಪ್ರಸಾದಿ ಮಹದೇವಸ್ವಾಮಿ. ಮಾಯಿ ಅಣ್ಣ ಕುಮಾರ್ ಮಾಜಿ ನಗರ ಸಭೆ ಸದಸ್ಯರಾದ ಪರ್ವೀನ್ ತಾಜ್ ಮಾಜಿ ಪುರಸಭೆ ಸದಸ್ಯರಾದ ಸೈಯದ್ ರಿಜ್ವಾನ್ ಅವರ ಪುತ್ರರು ಕಾಂಗ್ರೆಸ್ಸಿನ ಹಿರಿಯ ಯುವ ಮುಖಂಡರು ವಾಸಿಂ ತಂಝೀಮ್ ತಾಲೂಕಿನ ಗ್ಯಾರಂಟಿ ಯೋಜನೆಯ ಸಮಿತಿಯ ಅಧ್ಯಕ್ಷರಾದ ರಾಘು ಸದಸ್ಯರು ಮುಜೀಬ್ ಅಹ್ಮದ್ ಸಮುದಾಯದ ಯುವ ಮುಖಂಡರು . ಯುವ ಅಕ್ರಮ್. ಯೂಸುಫ್. ಸಲ್ಮಾನ್. ಶೇಖರ. ಶೌಕತ್ ಇಸುಫ್.. ಫೈರೋಜ್ ಹಾಗೂ ಇನ್ನಿತರು ಹಾಜರಿದ್ದರು

## ಕ್ರೀಡಾ ಸಾಮಗ್ರಿಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ , ಬೀದರ

2023–24ನೇ ಸಾಲಿನ ಯುವ ಚೈತನ್ಯ ಯೋಜನೆಯಡಿ ಬೀದರ ಜಿಲ್ಲೆಯ 2 ಯುವಕ ಸಂಘಗಳಿಗೆ ಕ್ರೀಡಾ ಸಾಮಗ್ರಿಗಳನ್ನು ವಿತರಿಸಬೇಕಾಗಿರುವುದರಿಂದ ಅರ್ಹ ಯುವಕ ಸಂಘಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಬೀದರ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಅರ್ಹತೆಗಳು: ಯುವಕ ಸಂಘಗಳು ಸಹಕಾರ ಸಂಘದಲ್ಲಿ ನೋಂದಣಿ ಆಗಿರಬೇಕು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಣಿ ಆಗಿರಬೇಕು, ಕನಿಷ್ಠ 25 ಸದಸ್ಯರನ್ನು ಹೊಂದರಬೇಕು, ಸದಸ್ಯರ ವಯೋಮಿತಿಯು 18 ರಿಂದ 29 ವರ್ಷದೊಳಗೆ ಇರಬೇಕು, ಯುವ ಸಂಘವು ಕ್ರಿಯಾಶೀಲವಾಗಿರಬೇಕು, ಕಳೆದ ಮೂರು ವರ್ಷಗಳ ಕಾರ್ಯಾ ಚಟುವಟಿಕೆಗಳ ಮಾಹಿತಿ ಒದಗಿಸುವುದು. ಅರ್ಹರು 2026ನೇ ಏಪ್ರಿಲ್.22 ರೊಳಗಾಗಿ ಬೀದರ ಯುವ ಸಬಲೀಕರಣ ಮತ್ತುಕ್ರೀಡಾ ಇಲಾಖೆಗೆ ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೊಬೈಲ್: 9980026489/9591609691ಗೆ ಸಂಪರ್ಕಿಸಲು ಅವರು ತಿಳಿಸಿದ್ದಾರೆ.

## ಅಧಿಕಾರ ಸ್ವೀಕಾರ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಕಲಬುರಗಿ ಉಪವಿಭಾಗ–1ರ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಅಭಿಷೇಕ್ ಪೋಲಾ ಇವರು 2026ರ ಏಪ್ರಿಲ್ 6 ರಂದು ಅಧಿಕಾರ ಸ್ವೀಕರಿಸಿದರು. ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಕಲಬುರಗಿ ಉಪವಿಭಾಗ–1ರ ಸಹಾಯಕ ಕಾರ್ಯಪಾಲಕ ಅಭಿಯಂತರ ಕಚೇರಿ ವ್ಯಾಪ್ತಿಯಲ್ಲಿ ಚಿತ್ತಾಪುರ ಹಾಗೂ ಕಲಬುರಗಿ ದಕ್ಷಿಣ ಮತಕ್ಷೇತ್ರಗಳು ಬರಲಿದೆ. ಕಲಬುರಗಿ ಉಪವಿಭಾಗ–1ರ ಕಚೇರಿಗೆ ಸಂಬಂಧಪಟ್ಟ ಎಲ್ಲಾ ಸರ್ಕಾರಿ, ಅರೆ ಸರ್ಕಾರಿ, ರಹಸ್ಯ ಪತ್ರ ಹಾಗೂ ಖಾಸಗಿ ಪತ್ರಗಳನ್ನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮ ನಿಯಮಿತ, ರಾಜಾಪುರ–ಕುಸನೂರ ರಸ್ತೆ ಕಲಬುರಗಿ–585105 ವಿಳಾಸಕ್ಕೆ ಕಳುಸಬೇಕೆಂದು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ ಕಲಬುರಗಿ ಉಪವಿಭಾಗ–1ರ ಸಹಾಯಕ ಕಾರ್ಯಪಾಲಕ ಅಭಿಯಂತರರು ತಿಳಿಸಿದ್ದಾರೆ.

## ಸಚಿವ ಪ್ರಿಯಾಂಕ್ ಖರ್ಗೆ ಅವರಿಂದ ಕಲಬುರಗಿ ಪಾಲಿಕೆಯ 6.07 ಕೋಟಿ ರೂ. ಮೊತ್ತದ ಸ್ವಚ್ಛತಾ ವಾಹನ ಲೋಕಾರ್ಪಣೆ



• ಮಲ್ಲಮ್ಮ ನುಡಿ ವಾರ್ತೆ,ಕಲಬುರಗಿ

ಕಲಬುರಗಿ ಮಹಾನಗರ ಪಾಲಿಕೆ ವತಿಯಿಂದ ನಗರದ ಸ್ವಚ್ಛತೆಗೆ ವಿವಿಧ ಅನುದಾನಗಳಡಿ ಒಟ್ಟು 607.37 ಲಕ್ಷ ರೂ. ಮೊತ್ತದಲ್ಲಿ ಖರೀದಿಸಲಾದ ವಾಹನ ಯಂತ್ರೋಪಕರಣಗಳನ್ನು ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಶುಕ್ರವಾರ ಡಿ.ಡಿ. ಕಚೇರಿ ಆವರಣದಲ್ಲಿ ಲೋಕಾರ್ಪಣೆ ಮಾಡಿದರು.

ಎಸ್.ಬಿ.ಎಂ–1.0 ಯೋಜನೆಯಡಿ 363.10 ಲಕ್ಷ ರೂ,. ವೆಚ್ಚದಲ್ಲಿ ಖರೀದಿಸಿದ 32 ಆಟೋ ಟಿಪ್ಪರ್, ಎಸ್.ಬಿ.ಎಂ.2.0 ಯೋಜನೆಯಡಿ 120.25 ಲಕ್ಷ ರೂ. ವೆಚ್ಚದಲ್ಲಿ ಖರೀದಿಸಿದ 03 ಫ್ರಂಟ್ ಎಂಡ್ ಬ್ಯಾಕ್ ಹೋ ಲೋಡರ್, 15ನೇ ಹಣಕಾಸು ಯೋಜನೆಯಡಿ 74.03 ಲಕ್ಷ ರೂ. ವೆಚ್ಚದಲ್ಲಿ 07 ಟ್ರ್ಯಾಕ್ಟರ್, 6 ಟ್ರೈಲರ್ ಹಾಗೂ 2 ಗಾರ್ಬೇಜ್ ಗ್ರ್ಯಾಬರ್ ವಾಹನಗಳು ಸ್ವಚ್ಛತಾ ಕಾರ್ಯಕ್ಕೆ ಮುಕ್ತಗೊಳಿಸಲಾಯಿತು.

ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಎಸ್. ಅಲ್ಲದ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ ಸೇರಿದಂತೆ ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷರು, ಸದಸ್ಯರು ಇದ್ದರು.



## ಎಸ್‌ಬಿಕೆ ಸಹಯೋಗದಲ್ಲಿ ರೈತರಿಗೆ ಸಾವಯವ ಕೃಷಿ ತರಬೇತಿ




• ಮಲ್ಲಮ್ಮ ನುಡಿ ವಾರ್ತೆ, ಗುರುಮಠಕಲ್

ಶ್ರೀ ಮೈಲಾರಲಿಂಗೇಶ್ವರ ರೈತ ಉತ್ಪಾದಕರ ಕಂಪನಿ ಹಾಗೂ ಎಸ್‌ಬಿಕೆ ಅಗ್ರೋಟೆಕ್ ಅವರ ಸಹಭಾಗಿತ್ವದಲ್ಲಿ ರೈತರಿಗೆ ಸಮಗ್ರ ಸಾವಯವ ಕೃಷಿ ತರಬೇತಿ

ಕಾರ್ಯಕ್ರಮವನ್ನು ಶುಕ್ರವಾರ ಕೃಷಿ ಉತ್ಪನ್ನ ಉಪ ಮಾರುಕಟ್ಟೆಯಲ್ಲಿ ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಗ್ರ ಸುಸ್ಥಿರ ಸಾವಯವ ಕೃಷಿ ಬೆಳೆ ಪದ್ಧತಿಯ ಕುರಿತು ಹಾಗೂ ಸಾಯಿಲ್ ತಾಕತ್ ಜೈವಿಕ ಗೊಬ್ಬರ ಬಳಕೆ ಕುರಿತು ರೈತರಿಗೆ ಬಿ.ಬಿ. ಕೌಲಗಿ, ಎಸ್‌ಬಿಕೆ ಅಗ್ರೋಟೆಕ್ ಎಫ್‌ಪಿಒ ಅಧ್ಯಕ್ಷರು ವಿವರವಾಗಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಶರಣು ಗದ್ದಗಿ, ಶ್ರೀ ಚರಬಸವೇಶ್ವರ ಸಂಸ್ಥಾನ ವಂಶಸ್ಥರು, ಶಹಾಪುರ ಹಾಗೂ ಕರವೇ ಉತ್ತರ ಕರ್ನಾಟಕ ಅಧ್ಯಕ್ಷರು ಮಾತನಾಡಿ, ಆಧುನಿಕ ಕೃಷಿಯಲ್ಲಿ ಸಾವಯವ ಕೃಷಿ ವಿಧಾನವನ್ನು ಬಳಸುವುದರಿಂದ ಬೆಳೆ ಉತ್ಪಾದನೆ ಹೆಚ್ಚಾಗುವುದರ ಜೊತೆಗೆ ಮಣ್ಣಿನ ಫಲವತ್ತತೆ ಹೆಚ್ಚಾಗಿ, ಪರಿಸರದ ಮೇಲಿನ ದುಷ್ಪರಿಣಾಮಗಳು ಕಡಿಮೆಯಾಗುತ್ತವೆ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಎಸ್‌ಬಿಕೆ ಅಗ್ರೋಟೆಕ್ ಅಧ್ಯಕ್ಷರು ಎಸ್. ಸತೀಶಕುಮಾರ್ ಕೌಲಗಿ, ಪ್ರಗತಿಪರ ರೈತರಾದ ಶಾಮರಾವ್ ದಿಗ್ಗಾವಿ, ಕುಮಾರ್ ಪಟ್ಟಣಶೆಟ್ಟಿ, ಮೈಲಾರಲಿಂಗೇಶ್ವರ ರೈತ ಉತ್ಪಾದಕರ ಕಂಪನಿ ಲಿಮಿಟೆಡ್

ಅಧ್ಯಕ್ಷರಾದ ಜಿ. ತಮ್ಮಣ್ಣ ಹಾಗೂ ನಿರ್ದೇಶಕರಾದ ಶ್ರೀಮತಿ ಶಾಂತಮ್ಮ, ಶ್ರೀಧರ್ ರೆಡ್ಡಿ, ಶ್ರೀನಿವಾಸ ಪುಟಪಾಕ, ಶೇಷಪ್ಪ ದಂತಪುರ, ಬಸವಂತರಾಯ ಗೌಡ (ಜಿಲ್ಲಾ ಸಂಯೋಜಕರು), ಯಾದವರೆಡ್ಡಿ ನಜರಾಪುರ, ಕಾರ್ತಿಕ್

ಕಲಾಲ್, ಶಾಮಪ್ಪ ಚಂಡರಕಿ, ಮಹೇಶ್ ಎಸ್.ಪಿ., ಹುಸೆನಪ್ಪ ಪುಲಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಅನೇಕ ರೈತರು ಭಾಗವಹಿಸಿದರು.

# ಮಾಚನೂರಿನಲ್ಲಿ ಸಂಭ್ರಮದ ಬಸವೇಶ್ವರ ರಥೋತ್ಸವ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ವಡಗೇರಾ ತಾಲ್ಲೂಕಿನ ಮಾಚನೂರು ಗ್ರಾಮದ ಸಿದ್ದಲಿಂಗೇಶ್ವರ ಪಶ್ಚಿಮಾದ್ರಿ ವಿರಕ್ತಮಠದ ಬಸವೇಶ್ವರ ಜಾತ್ರಾ ಮಹೋತ್ಸವದ ರಥೋತ್ಸವವು ಭಕ್ತರ ಜಯ ಘೋಷದೊಂದಿಗೆ ಸಂಭ್ರಮದಿಂದ ಜರುಗಿತು.

ಮಠದ ಪಿಠಾಧಿಪತಿ ಪಂಚಮ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮಂಗಳವಾರ ಸಂಜೆ 6 ಗಂಟೆಗೆ ಬಸವೇಶ್ವರ ಜಾತ್ರಾ ರಥೋತ್ಸವ ಜರುಗಿತು.

ಜಾತ್ರೆಗೆ ಸುತ್ತಮುತ್ತಲಿನ ಗ್ರಾಮದ ಭಕ್ತರಲ್ಲದೆ ಪಕ್ಕದ ಜಿಲ್ಲೆಯಿಂದ ಭಕ್ತರು ಆಗಮಿಸಿ ದೇವಾಲಯದಲ್ಲಿ ಬಸವೇಶ್ವರ ದೇವರಿಗೆ ನೈವೈದ್ಯ, ಕಾಯಿ ಹೂ, ಹಣ್ಣುಗಳಿಂದ ತಮ್ಮ ಹರಕೆಯನ್ನು ಅರ್ಪಿಸಿದರು. ಸಂಜೆ ರಥೋತ್ಸವ ಸಮಯದಲ್ಲಿ ಭಕ್ತರು ರಥಕ್ಕೆ ಉತ್ತತ್ತಿ, ಕಬ್ಬಿನ ತುಣುಕ, ಬಾಳೆಹಣ್ಣುಗಳನ್ನು ಎಸೆದು ಸಮರ್ಪಿಸಿದರು. ತಮ್ಮ ಹರಕೆಯನ್ನು ಜಾತ್ರೆಯ ರಥೋತ್ಸವ ಜರುಗಿತು.

ನಂತರ ನಡೆದ ಧರ್ಮಸಭೆಯಲ್ಲಿ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ, ಜಿಪಂ ಮಾಜಿ ಸದಸ್ಯ ಸಿದ್ದಣ್ಣಗೌಡ ಕಾಡಂನೋರ, ಬಿಜೆಪಿ ಹಿರಿಯ ಮುಖಂಡ ಮುಖಂಡರಾದ ರಾಚಣ್ಣಗೌಡ ಮುದ್ನಾಳ್, ಮಹೇಶರೆಡ್ಡಿ ಮುದ್ನಾಳ್, ವೀರುಪಾಕ್ಷಪ್ಪಗೌಡ ಹಣಮಂತ್ರಾಯಗೌಡ ಪರಸಾಪೂರ, ವಿಶ್ವನಾಥರೆಡ್ಡಿ, ಷಣ್ಮುಖಯ್ಯ, ಶರಣಯ್ಯ ಸ್ವಾಮಿ, ಸೇರಿದಂತೆಯೇ ಭಕ್ತರು ಶರಣಯ್ಯಸ್ವಾಮಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಗುರುವಾರ ಬೆಳಗಿನ ಜಾವ 5ಕ್ಕೆ ಅಗ್ನಿ ತುಳಿಯುವ ಕಾರ್ಯ ನಡೆಯಿತು.

## ದೇಗುಲ ಅಭಿವೃದ್ಧಿಗೆ ಕ್ರಮ

"ಕಾರ್ಯಕ್ರಮಕ್ಕೆ ಆಗಮಿಸಿದ್ದ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಅವರಿಗೆ ಗ್ರಾಮಸ್ಥರು ಮನವಿ ಪತ್ರ ಸಲ್ಲಿಸಿ, ಬಸವೇಶ್ವರ ದೇವಸ್ಥಾನದ ಅಭಿವದ್ಧಿಗೆ ಆರ್ಥಿಕ ನೆರವು ಒದಗಿಸಬೇಕೆಂದು ಮನವಿ ಮಾಡಿದರು. ಇದಕ್ಕೆ ತಕ್ಷಣವೇ ಸ್ಪಂದಿಸಿದ ಶಾಸಕರು ಏನು ಕೆಲಸ ಆಗಬೇಕೆಂಬ ಪಟ್ಟಿ ಮಾಡಿ ನೀಡಿ, ಅದಕ್ಕೆ ಬೇಕಾದ ಅನುದಾನ ನೀಡುವ ಭರವಸೆ ನೀಡಿದರು.



# ಎಪಿಡಿಯಿಂದ ವಿಕಲಚೇತನರಿಗೆ ಸಾಧನ ಸಲಕರಣೆ ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಮುದಾಯ ಆರೋಗ್ಯ ಕೇಂದ್ರ ವಡಗೇರದಲ್ಲಿ ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ಸಂಸ್ಥೆಯ ವತಿಯಿಂದ ವಿಕಲಚೇತನರಿಗೆ ಸಾಧನ–ಸಲಕರಣೆಗಳ ವಿತರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ ತಹಸೀಲ್ದಾರ್ ಮಂಗಳ ವಡಗೇರ, ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶಶಿಧರ್ ಹಿರೇಮಠ, ವೈದ್ಯಾಧಿಕಾರಿ ಡಾ. ಭವಾನಿ, ಪಶು ವೈದ್ಯಕೀಯ ಇಲಾಖೆಯ ಪ್ರಿಯಾಂಕಾ, ಆರ್‌ಪಿಡಿ ಆಕ್ಟ್ ತಾಲ್ಲೂಕು ಅಧ್ಯಕ್ಷ ದಾವಲ್ ಸಾಬ್ ಹಾಗೂ ಎಎಟಿ ಬೆಂಗಳೂರು ನಾಗೇಶ್ ಬೂದಿಹಾಳ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ತಹಸೀಲ್ದಾರ್ ಮಂಗಳ ವಡಗೇರ, ಎಪಿಡಿ ಸಂಸ್ಥೆಯವರು ವಿಕಲಚೇತನರನ್ನು ಗುರುತಿಸಿ ಅವರಿಗೆ ಅಗತ್ಯವಿರುವ ಸಾಧನ–ಸಲಕರಣೆಗಳನ್ನು ನೀಡುತ್ತಿರುವುದು ಉತ್ತಮ ಕಾರ್ಯ. ನಮ್ಮ ಕಂದಾಯ ಇಲಾಖೆಗೆ ತೀವ್ರವಾಗಿ ಬಳಲುತ್ತಿರುವ ವಿಕಲಚೇತನರ ಮಾಹಿತಿ ನೀಡಿದರೆ, ನಮ್ಮ ಸಿಬ್ಬಂದಿ ಅವರ ಮನೆಗೆ ತೆರಳಿ ಪಿಂಚಣಿ ಸೌಲಭ್ಯ ಕಲ್ಪಿಸುತ್ತಾರೆ ಎಂದು ಹೇಳಿದರು. ಎಪಿಡಿ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದೆ ಎಂದರು. ನಂತರ ಮಾತನಾಡಿದ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಶಶಿಧರ್ ಹಿರೇಮಠ, ಎಪಿಡಿ ಸಂಸ್ಥೆ 1959ರಲ್ಲಿ ಸ್ಥಾಪನೆಯಾಗಿ ಇಂದಿಗೂ ವಿಕಲಚೇತನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿರುವುದು ಸಂತಸದ ವಿಷಯ.

ಇದರ ಸದುಪಯೋಗವನ್ನು ಎಲ್ಲರೂ ಪಡೆಯಬೇಕು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಾಲ್ಲೂಕು ಸಂಯೋಜಕರು ರಮೇಶ್ ಕಟ್ಟಿಮನಿ, ಫಿಸಿಯೋಥೆರಪಿಸ್ಟ್ ಜಗದೀಶ್ವರಿ, ಬ್ಲೆಸ್ಸಿ ಕೇರೋನ್, ಶ್ರೀಚರಣ್ ತೇಜ, ಸಿಬ್ಬಂದಿಗಳಾದ ಬಸವರಾಜ ಕುಂಬಾರ, ಅಂಜನಯ್ಯ, ಪವಾರ್, ನಾಗಪ್ಪ ವಗ್ಗರ್, ಉಜ್ಜಂಗೌಡ, ಅನಿಮೇಟರ್‌ಗಳಾದ ತಸ್ಲೀಮ್, ಜೀವನ್, ಹರೀಶ್ವರ, ಮೌಲಾಲಿ, ಚಂದ್ರಕಲಾ, ವಿಜಯಲಕ್ಷ್ಮಿ, ಶಿವರಾಜ್, ಅಂಜನಯ್ಯ ಹಾಗೂ ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಶಶಿಕಲಾ ದೊಡ್ಡಮನಿ 90.3%




• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಯಾದಗಿರಿ ನಗರದ ಎಸ್. ಎಸ್. ಸ್ವತಂತ್ರ ಪದವಿ ಪೂರ್ವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿ ಶಶಿಕಲಾ ಶರಣಪ್ಪದೊಡ್ಡಮನಿ ಇವರು 2025–26 ನೇ ಸಾಲಿನ ವಾರ್ಷಿಕ ಪರೀಕ್ಷೆಯಲ್ಲಿ ಒಟ್ಟು ಗರಿಷ್ಠ 600 ಅಂಕಗಳಿಗೆ 542 ಅಂಕಗಳು ಪಡೆದು ಉನ್ನತ ಶ್ರೇಣಿ (ಡಿಸ್ಟಿಂಕ್ಷನ್) ಶೇಕಡಾ 90.3% ಫಲಿತಾಂಶ ಪಡೆದುಕೊಂಡಿದ್ದಾಳೆ.

ವಿಷಯವಾರ ಅಂಕ: ಕನ್ನಡ–91, ಹಿಂದಿ–94 ಭೌತಶಾಸ್ತ್ರ–92, ರಾಸಾಯನಶಾಸ್ತ್ರ–84, ಗಣಿತಶಾಸ್ತ್ರ–90, ಜೀವಶಾಸ್ತ್ರ–91, ಅಂಕಗಳನ್ನು ಪಡೆದು ಕಾಲೇಜಿಗೆ ಮತ್ತು ತಂದೆ ತಾಯಿಯವರಿಗೆ ಕೀರ್ತಿ ತಂದಿದ್ದಾಳೆ. ನಾನು ದಿನಾಲು ಮನೆಯಲ್ಲಿ ಕಷ್ಟಪಟ್ಟು ಓದಿದೆ, ಇಷ್ಟಪಟ್ಟು 8 ತಾಸು ಅಭ್ಯಾಸ ಮಾಡುತ್ತಿದ್ದೆ. ನನ್ನ ಓದಿಗೆ ಕಾಲೇಜಿನ ಉಪನ್ಯಾಸಕರ (ಗುರುಗಳು) ಮಾರ್ಗದರ್ಶನ ಮತ್ತು ತಂದೆ ತಾಯಿಯವರ ಆಶೀರ್ವಾದ ಪ್ರೇರಣೆಯೇ ಮುಖ್ಯ ಕಾರಣ ಎಂದು ಶಶಿಕಲಾ ಹೇಳಿಕೊಂಡಿದ್ದಾಳೆ, ವಿದ್ಯಾರ್ಥಿನಿಯ ಈ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರಾದ ಸಂತೋಷ ಮತ್ತು ಸುನೀಲ್ ಹಾಗೂ ಸಿಬ್ಬಂದಿ ವರ್ಗದವರು ಶುಭ ಹಾರೈಸಿ ಹರ್ಷ ವ್ಯಕ್ತಪಡಿಸಿದ್ದಾರೆ.

# ಪಿಯುಸಿ ಫಲಿತಾಂಶ: ಆಶೀರ್ವಾದ ಕಾಲೇಜು ವಿದ್ಯಾರ್ಥಿ ಸಾಧನೆಗೆ ಅಧ್ಯಕ್ಷರಿಂದ ಮೆಚ್ಚುಗೆ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ಇಸ್ಲಾಂಪುರು ಕ್ರಾಸ್ ಹತ್ತಿರ ಇರುವ ಆಶೀರ್ವಾದ ಪದವಿಪೂರ್ವ ಕಾಲೇಜಿನ ಪಿಯುಸಿ ದ್ವಿತೀಯ ವರ್ಷದ ಫಲಿತಾಂಶದಲ್ಲಿ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ಗಮನಸೆಳೆದಿದ್ದಾರೆ.

ಮನೋಹರ ಚಂದನ್ ಕೇರಿ 92.67% ಅಂಕಗಳೊಂದಿಗೆ ಅಗ್ರಸ್ಥಾನ ಪಡೆದಿದ್ದು, ಮಂಜುನಾಥ್ ಮತ್ತು ಸದಾಶಿವ ಗುಂಡಲಿಗೇರಿ ತಲಾ 91.67%, ವೆಂಕಟೇಶ್ 90.83%, ಮಣಿಕಂಠ 90.67%, ಭಾಗ್ಯಶ್ರೀ ಸಜ್ಜನ್ 90.33% ಸೇರಿದಂತೆ ಅನೇಕ ವಿದ್ಯಾರ್ಥಿಗಳು ಶ್ರೇಷ್ಠ ಸಾಧನೆ ಮಾಡಿದ್ದಾರೆ.

ಈ ಸಾಧನೆ ಕುರಿತು ಕಾಲೇಜಿನ ಅಧ್ಯಕ್ಷರಾದ ಡಾ. ವೀರಭದ್ರಗೌಡ ಹೊಸಮನಿ ಅವರು ಮೆಚ್ಚುಗೆ ವ್ಯಕ್ತಪಡಿಸಿ, "ಗ್ರಾಮೀಣ ಹಿನ್ನೆಲೆಯಲ್ಲಿದ್ದರೂ ನಮ್ಮ ವಿದ್ಯಾರ್ಥಿಗಳು ನಗರ ಮಟ್ಟದ ಸ್ಪರ್ಧೆಯಲ್ಲಿ ತಾವು ತಕ್ಕ ಸಾಮರ್ಥ್ಯ ಹೊಂದಿದ್ದಾರೆ ಎಂಬುದನ್ನು ಈ ಫಲಿತಾಂಶ ಸಾಬೀತುಪಡಿಸಿದೆ. ವಿದ್ಯಾರ್ಥಿಗಳ ಪರಿಶ್ರಮ, ಉಪನ್ಯಾಸಕರ ಸಮರ್ಪಿತ ಬೋಧನೆ ಹಾಗೂ ಪೋಷಕರ ಸಹಕಾರದಿಂದ ಈ ಯಶಸ್ಸು ಸಾಧ್ಯವಾಗಿದೆ" ಎಂದು ತಿಳಿಸಿದ್ದಾರೆ.

ಇದೇ ರೀತಿಯಲ್ಲಿ ಮುಂದಿನ ದಿನಗಳಲ್ಲಿಯೂ ವಿದ್ಯಾರ್ಥಿಗಳನ್ನು ಉನ್ನತ ಮಟ್ಟಕ್ಕೆ ತಲುಪಿಸುವಲ್ಲಿ ಸಂಸ್ಥೆ ನಿರಂತರವಾಗಿ ಶ್ರಮಿಸುತ್ತದೆ ಎಂದು ಅವರು ಹೇಳಿದರು. ಎಲ್ಲಾ ಸಾಧಕ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರಿಗೆ ಅಭಿನಂದನೆಗಳನ್ನು ಅರ್ಪಿಸಿದರು.

ಈ ಸಂದರ್ಭದಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಅಧ್ಯಕ್ಷರು, ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಸನ್ಮಾನಿಸಿ ಗೌರವಿಸಿದರು.

# ಗ್ರೇಡಿಂಗ್ ನೀಡುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ನಾಯಕ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಎಸ್ ಎಸ್ ಎಲ್ ಸಿ ಯಲ್ಲಿ ತೃತೀಯ ಭಾಷೆಯನ್ನು ಅಂಕಗಳಿಂದ ಅಳೆಯುವ ಬದಲು ಗ್ರೇಡಿಂಗ್ ನೀಡುವ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧ ಹೂಡಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿರುವುದಷ್ಟೇ ಅಲ್ಲದೆ, ಪ್ರಚಾರದ ಹಂಬಲದಿಂದ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಒಂದು ಲಕ್ಷ ರುಪಾಯಿಗಳ ದಂಡ ವಿಧಿಸಿರುವ ಸುದ್ದಿ ಮಾಧ್ಯಮಗಳಲ್ಲಿ ವರದಿಯಾಗಿದೆ ಎಂದು ಕರ್ನಾಟಕ ರಕ್ಷಣಾ ವೇದಿಕೆ ಯಾದಗಿರಿ ಜಿಲ್ಲಾಧ್ಯಕ್ಷ ಟಿ.ಎನ್. ಭೀಮುನಾಯಕ ಆಕ್ರೋಶ ವ್ಯಕಪಡಿಸಿದರು. ಇದು ಹಿಂದಿಹೇರಿಕೆ ಪರವಾಗಿ ವಾದ ಮಾಡುತ್ತಿದ್ದವರಿಗೆ ನೇರವಾಗಿ ಮಾಡಿದ ಕಪಾಳಮೋಕ್ಷ. ಹಿಂದಿಯನ್ನೂ ಸಂಪೂರ್ಣವಾಗಿ ಕೈಬಿಡಲಾಗಿದೆ ಎಂಬ ಅರ್ಥದ ಹೇಳಿಕೆಯು ಮಾಧ್ಯಮಗಳಲ್ಲಿ ಪ್ರಕಟವಾಗಿಲ್ಲ. ಹೀಗಿದ್ದರೂ ಪೂರ್ವಾಗ್ರಹ ಪೀಡಿತವಾಗಿ ಅರ್ಜಿ ಸಲ್ಲಿಸಲಾಗಿದೆ ಎಂದು ಮುಖ್ಯನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ಪೀಠ ಕಿಡಿ ಕಾರಿದೆ ಎಂದು ವರದಿಗಳು ಹೇಳುತ್ತಿವೆ. ಕೇವಲ ಪತ್ರಿಕಾ ಹೇಳಿಕೆ ಓದಿ ನೀವು ಪಿಐಎಲ್ ಸಲ್ಲಿಸಿದ್ದೀರಾ ಎಂದು ನ್ಯಾಯಪೀಠ ಅರ್ಜಿದಾರರನ್ನು ಪ್ರಶ್ನಿಸಿತ್ತು. ತೃತೀಯ ಭಾಷೆ ಗ್ರೇಡಿಂಗ್ ವ್ಯವಸ್ಥೆಯನ್ನು ಹಲವು ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಮನಸಿಗೆ ಬಂದಂತೆ ವ್ಯಾಖ್ಯಾನಿಸಿ ಗೊಂದಲ ಉಂಟುಮಾಡಿದ್ದರು. ಹಿಂದಿಯೂ ಸೇರಿದಂತೆ ಮೂರನೇ ಭಾಷೆಯ ಕಲಿಕೆಯನ್ನು ರಾಜ್ಯ ಸರ್ಕಾರ ಹಿಂದಕ್ಕೆ ಪಡೆದಿರಲಿಲ್ಲ. ಆದರೆ ಇದನ್ನು ತಪ್ಪುತಪ್ಪಾಗಿ ಬಿಂಬಿಸಲಾಯಿತು ಮಾತ್ರವಲ್ಲ, ಹೈಕೋರ್ಟ್ ವರೆಗೆ ತೆಗೆದುಕೊಂಡುಹೋಗಲಾಯಿತು. ಈಗ ಅಲ್ಲಿ ಅವರಿಗೆ ಮುಖಭಂಗವಾಗಿದೆ. ಮೊದಲು ಐವತ್ತು ಸಾವಿರ ದಂಡ ವಿಧಿಸಿದ್ದ ನ್ಯಾಯಾಲಯ ನಂತರ ಒಂದು ಲಕ್ಷ ರುಪಾಯಿ ದಂಡಕ್ಕೆ ಏರಿಸಿರುವುದು ಇದಕ್ಕೆ ಸಾಕ್ಷಿ. ರಾಜ್ಯ ಸರ್ಕಾರ ತನ್ನ ನೀತಿಯ ಕುರಿತು ಇನ್ನೂ ನಿಯಮಾವಳಿಗಳನ್ನು ರೂಪಿಸುವ, ಆದೇಶ ಹೊರಡಿಸುವ ಮುನ್ನವೇ ನ್ಯಾಯಾಲಯಕ್ಕೆ ಹೋದವರು ಬಹಳ ಆತುರವಾಗಿ ಏನನ್ನೋ ಸಾಧಿಸುವ ಉದ್ದೇಶ ಹೊಂದಿದ್ದರು. ಒಂದು ವೇಳೆ ಅರ್ಜಿ ಸ್ವೀಕೃತವಾಗಿದ್ದರೆ ಕರ್ನಾಟಕ ರಕ್ಷಣಾ ವೇದಿಕೆಯೂ ಸಹ ವಿದ್ಯಾರ್ಥಿಗಳ ಪರ ಕಾನೂನು ಹೋರಾಟ ನಡೆಸಲು ಸಜ್ಜಾಗಿತ್ತು. ಆದರೆ ಅರ್ಜಿ ವಜಾಗೊಳಿಸಿ, ಅರ್ಜಿದಾರರಿಗೆ ದಂಡ ವಿಧಿಸಲಾಗಿರುವುದರಿಂದ ಪಟ್ಟಭದ್ರ ಶಕ್ತಿಗಳ ಹುನ್ನಾರ ವಿಫಲವಾಗಿದೆ. ರಾಜ್ಯ ಸರ್ಕಾರ ಕೂಡಲೇ ನಿಯಮಾವಳಿಗಳನ್ನು ರೂಪಿಸಿ, ಗ್ರೇಡಿಂಗ್ ವ್ಯವಸ್ಥೆ ಜಾರಿಗೊಳಿಸಬೇಕು. ಹಿಂದಿ ಸಾಮ್ರಾಜ್ಯಶಾಹಿಗಳ ಹುನ್ನಾರಗಳಿಗೆ ಮಣೆ ಹಾಕಬಾರದು. ಕನ್ನಡದ ಮಕ್ಕಳ ಹಿತಾಸಕ್ತಿಯನ್ನು ಕಾಪಾಡಬೇಕು ಎಂದು ಹೇಳಿದರು.

# ಬಸವಶ್ರೀ ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನ



• ಮಲ್ಲಮ್ಮ ನುಡಿ ವಾರ್ತೆ ಹುಣಸಗಿ

ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಬಸವಶ್ರೀ ಅವರು ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ.

ಬಸವಶ್ರೀ (ತಂದೆ: ಶಿವಕುಮಾರ ಬಂಡೋಳಿ) ಅವರು ಕಲಾ ವಿಭಾಗದಲ್ಲಿ 600ರಲ್ಲಿ 564 ಅಂಕಗಳನ್ನು (94%) ಗಳಿಸಿ ಸರಕಾರಿ ಪ.ಪೂ. ಕಾಲೇಜು, ಹುಣಸಗಿ ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಅವರ ಈ ಸಾಧನೆಗೆ ಕಾಲೇಜಿನ ಉಪನ್ಯಾಸಕರು, ಪೋಷಕರು ಹಾಗೂ ಸ್ನೇಹಿತರು ಸಂತೋಷ ವ್ಯಕ್ತಪಡಿಸಿದ್ದಾರೆ.

ವಿದ್ಯಾರ್ಥಿನಿಯ ಸಾಧನೆಗೆ ಹುಣಸಗಿ ಪಟ್ಟಣದ ಹಿರಿಯರು ಹಾಗೂ ವಿವಿಧ ಮುಖಂಡರು ಅಭಿನಂದನೆಗಳನ್ನು ಸಲ್ಲಿಸಿದ್ದು, ಅವರ ಪರಿಶ್ರಮ ಮತ್ತು ಶಿಕ್ಷಕರ ಮಾರ್ಗದರ್ಶನವನ್ನು ಮೆಚ್ಚಿದ್ದಾರೆ.

ಮಗಳ ಈ ಸಾಧನೆಗೆ ತಂದೆ–ತಾಯಿ ಸಿಹಿ ತಿನಿಸಿ ಸಂತೋಷ ಹಂಚಿಕೊಂಡು ಖುಷಿ ವ್ಯಕ್ತಪಡಿಸಿದ್ದಾರೆ. ಬಸವಶ್ರೀ ಅವರ ಸಾಧನೆ ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಮುಂದಿನ ವಿದ್ಯಾಭ್ಯಾಸಕ್ಕೂ ಎಲ್ಲರೂ ಶುಭಾಶಯಗಳನ್ನು ತಿಳಿಸಿದ್ದಾರೆ.

# ಬೇಸಿಗೆ ಶಿಬಿರದಿಂದ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಸಾಧ್ಯ: ಓಂಕಾರ್ ರೆಡ್ಡಿ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಭೀಮಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆ ವತಿಯಿಂದ ಸಿದ್ದಾರ್ಥ್ ಕೊಚೀಂಗ್ ಸೇಂಟರ್ ಬೆಸಿಗೆ ಶಿಬಿರ ಪ್ರಾರಂಭ ಮಾಡಲಾಯಿತ್ತು ಇಂತಹ ಬೇಸಿಗೆ ಶಿಬಿರದಿಂದ ಮಕ್ಕಳಲ್ಲಿ ಮುಂದಿನ ತರಗತಿಯ ಬಗ್ಗೆ ಅಭ್ಯಾಸ ಮಾಡಿ ಬೇಸಿಗೆ ಶಿಬಿರದಲ್ಲಿ ಪಾಲ್ಗೊಂಡ ಮಕ್ಕಳು ಇಡೀ ಶಾಲೆಗೆ ಓದಿನಲ್ಲಿ ಮುಂದೆ ಬರುತ್ತಾರೆ ಮಕ್ಕಳ ಶೈಕ್ಷಣಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ಹೇಳಿದರು ಸಿದ್ದಾರ್ಥ್ ಕೋಚಿಂಗ್ ಸೆಂಟರ್ ನ ನಿರ್ದೇಶಕರಾದ ಭೀಮಾಶಂಕರ ಎಂ ಯರಗೋಳ ಇವರು ಮಾತನಾಡಿ ಯರಗೋಳ ಗ್ರಾಮದಲ್ಲಿ ಪ್ರಾರಂಭಿಸಿದ ಸಿದ್ದಾರ್ಥ್ ಕೋಚಿಂಗ್ ಸೆಂಟರ್ ನ ಎರಡನೇ ವರ್ಷ ಪ್ರಾರಂಭ ಮಾಡಿದ್ದೆವೆ, ಪ್ರತಿ ಮಗುವಿನಲ್ಲಿ ಒಂದೊಂದು ಕಲೆ ಇರುತ್ತದೆ ಆದ್ದರಿಂದ ಅದನ್ನು ಗುರುತಿಸಿ ,

ನಮ್ಮ ಕೋಚಿಂಗ್ ಸೆಂಟರ್ ನ ವತಿಯಿಂದ ವಾರಕ್ಕೆ ಒಂದು ದಿನ ಮಕ್ಕಳಲ್ಲಿನ ವಿವಿಧ ಪ್ರತಿಭೆಗಳನ್ನು ಗುರುತಿಸಿ ಅವರಿಗೆ ಇಷ್ಟ ಇರುವ ಸಂಗೀತ ನೃತ್ಯ ಭರತನಾಟ್ಯ ಕ್ರೀಡೆ ಮುಂತಾದವುಗಳ ಬಗ್ಗೆ ತರಬೇತಿ ನೀಡಲಾಗುವುದು ಜೊತೆಗೆ 15 ದಿನಕ್ಕೊಂದು ದಿನ ಸಂಪನ್ಮೂಲ ವ್ಯಕ್ತಿಗಳಿಂದ ಮಕ್ಕಳು ಹೇಗೆ ಅಭ್ಯಾಸ ಮಾಡಬೇಕು ಹೇಗೆ ನೆನಪಿನಲ್ಲಿಟ್ಟುಕೊಳ್ಳಬೇಕು ಭಯವಿಲ್ಲದೆ ಪರೀಕ್ಷೆಯನ್ನು ಹೇಗೆ ಬರೆಯಬೇಕು


ಎಂಬುದನ್ನು ಕೂಡ ತರಬೇತಿ ನೀಡಲಾಗುತ್ತದೆ ಮತ್ತು ಮನೋರಂಜನ ಕಾರ್ಯಕ್ರಮವನ್ನು ಏರ್ಪಡಿಸಲಾಗುತ್ತದೆ ಎಂದು ಸಿದ್ದಾರ್ಥ ಕೋಚಿಂಗ್ ಸೆಂಟರ್ ನಿರ್ದೇಶಕರು ಹಾಗೂ ಭೀಮ ಜ್ಯೋತಿ ಗ್ರಾಮೀಣ ಅಭಿವೃದ್ಧಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಭೀಮಾಶಂಕರ ಎಂ ಯರಗೋಳ ಇವರು ಹೇಳಿದರು ಸ.ಪ.ಪೂ.ಕಾಲೇಜಿನ ಪ್ರಾಂಶುಪಾಲರಾದ ಓಂಕಾರಡ್ಡಿ ಸರ್ ಸರಸ್ವತಿ ಭಾವಚಿತ್ರಕ್ಕೆ ಪೂಜೆ ಮಾಡುವುದರೊಂದಿಗೆ ಚಾಲನೆ ನೀಡಿದರು

ಅತಿಥಿಗಳಾಗಿ ಸ.ಮಾ.ಪ್ರಾ.ಶಾಲೆಯ ಎಸ್ ಡಿ ಎಂ ಸಿ ಅಧ್ಯಕ್ಷರಾದ ಜಯಶ್ರೀ ದೇವಪ್ಪದೇಸಿ, ಬಸವರಾಜ ಗುಳೆದ, ವಿಜಯಕುಮಾರ್ ಪಾಟೀಲ್ ಇಂಗ್ಲಿಷ್ ಶಿಕ್ಷಕರು ಸಿದ್ದಾರ್ಥ್

ಕೋಚಿಂಗ್ ಸೇಂಟರ್ ಯರಗೋಳ ಶ್ರೀಮತಿ ಮಾಲಾಶ್ರೀ ಬಿ ಯರಗೋಳ ಮುಖ್ಯ ಗುರುಗಳು ಸಿದ್ದಾರ್ಥ ಕೋಚಿಂಗ್ ಸೆಂಟರ್ ಭೀಮಾಶಂಕರ ಎಂ ಯರಗೋಳ

ಇವರು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು . ಸಿದ್ದಾರ್ಥ್ ಕೋಚಿಂಗ್ ಸೆಂಟರ್ ನ ವಿದ್ಯಾರ್ಥಿನಿ ಕುಮಾರಿ ಭವಾನಿ ಕಾರ್ಯಕ್ರಮವನ್ನು ನಿರೂಪಿಸಿದಳು ಎಲ್ಲಾ ಶಿಕ್ಷಕರು ಹಾಗೂ ವಿಧ್ಯಾರ್ಥಿಗಳು ಬಾಗವಹಿಸಿದರು.

# ನೂತನ ನಿರ್ದೇಶಕರಿಗೆ ಸನ್ಮಾನ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರ ಆಶ್ರಯ ಸಮಿತಿಗೆ ಸರ್ಕಾರದ ನಾಮನಿರ್ದೇಶಕರಾಗಿ ನೂತನವಾಗಿ ನಿರ್ದೇಶಕರ ಆಯ್ಕೆಯಾಗಿರುವ ಮೊಹಮ್ಮದ್ ಸಲಾಉದ್ದೀನ್ ಅಮೀನ್ ಮಂಜುನಾಥ್ ಪ್ರಿಯಾಂಕ ವೇಣುಗೋಪಾಲ್ ರವರನ್ನು ಶಾಸಕರು ಕಚೇರಿಯಲ್ಲಿ ಶಾಸಕರಾದ ಜಿ ಟಿ ಹರೀಶ್ ಗೌಡ ನಗರಸಭೆ ಆಯುಕ್ತರು ಮಾನಸ

ಆರ್ ಐ ಸಿದ್ದರಾಜು ಚಂದ್ರು ಸನ್ಮಾನಿಸಿ ಗೌರವಿಸಿದರು

ನಗರದ ಶಾಸಕರ ಕಚೇರಿಯಲ್ಲಿ ಪ್ರಥಮ ಆಶ್ರಯ ಸಮಿತಿಯ ಸದಸ್ಯರು ಹಾಗೂ ನಗರಸಭೆ ಅಧಿಕಾರಿಗಳ ಸಭೆ ಸಭೆ ನಡೆಸಿ ಹ ನಂತರ ಶಾಸಕರಾದ ಜಿ ಟಿ ಹರೀಶ್ ಗೌಡ ಸುದ್ದಿಗಾರರೊಂದಿಗೆ ಮಾತನಾಡಿ ನಗರದ ಆಶ್ರಯ ಸಮಿತಿಯ ನಿವೇಶನದ ಬಗ್ಗೆ ಈಗಾಗಲೇ

248 ಹಕ್ಕು ಪತ್ರ ಅರ್ಜಿಗಳು ನಗರಸಭೆಗೆ ಬಂದಿದೆ ಅದನ್ನು ನಗರಸಭೆ ಆಯುಕ್ತರದ ಮಾನಸ ಹಾಗೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಅರ್ಜಿಗಳನ್ನು ಪರಿಶೀಲಿಸಿ ಮೊದಲ ಹಂತದಲ್ಲಿ ಕ್ರಮ ಕೈಗೊಳ್ಳಲು ಸಂಪೂರ್ಣವಾಗಿ ಬಡವರಿಗೆ ನೀಡಲು ನಾನು ಸಹಕರಿಸುತ್ತೇನೆ ಎಂದರು

ನಗರದ ಇನ್ನು ಉಳಿದಂತ ನಿವೇಶನಗಳ ನಗರಸಭೆಯ ನೋಟಿಸ್ ಬೋರ್ಡ್ ಗೆ ನಕಲು ದಾಖಲೆಗಳನ್ನು ತಂದು ನಗರಸಭೆ ಕಚೇರಿಗೆ ಫಲಾನುಭವಿಗಳು ನೀಡಬೇಕು ಅದು ಕೂಡ ಅಂತಂತವಾಗಿ ಪರಿಶೀಲನೆ ಮಾಡಿ ಕಮ ತಮಗೆಗಳುತ್ತೇನೆ ಎಂದರು

ನಗರ ಕೆಲವು ದಿನಗಳ ಹಿಂದೆ ಜಿ ಪ್ಲೇಸ್ ಟು ನಿವೇಶನ ನೀಡುತ್ತೇವೆ ಎಂದು ನಗರದ ನಿವಾಸಿಗಳಿಂದ ಅರ್ಜಿಗಳನ್ನು ಕೂಡ ಫಲಾನುಭವಿಗಳು ಹಾಕಿದ್ದರಿಂದ ಅದಕ್ಕೂ ಕೂಡ ಸರ್ಕಾರದಿಂದ ಸಂಪೂರ್ಣವಾಗಿ ಅನುಮೋದನೆ ಪಡೆದು ಸಮಸ್ಯೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳುತ್ತೇನೆ ಎಂದ ಭರವಸೆ ನೀಡಿದರು ಎಂದು

ನಗರ ಆಶ್ರಯ ಸಮಿತಿಯ ನಾಮನಿರ್ದೇಶಕರು ಮೊಹಮ್ಮದ್ ಸಲಾವದ್ದೀನ್ ಅಮೀನ್ ಮಾತನಾಡಿ ನಗರದ ಆಶ್ರಯ ಸಮಿತಿಯ ಸಮಸ್ಯೆ ಬಹಳ ದೊಡ್ಡದಾಗಿದೆ ಆದರೆ 870 ನಿವೇಶನವನ್ನು ಗುರುತಿಸಿ ಕೊಡದಲ್ಲದೆ ನಾವು ಅವರಿಗೆ 870 ಕುಟುಂಬಗಳಿಗೆ ವಾಸ

ಮಾಡುವ ಬಡವರಿಗೆ ಗುರುತಿಸಿಕೊಟ್ಟು ಜೊತೆಗೆ ಅವರಿಗೆ ಮೂಲಭೂತ ಸೌಕರ್ಯವನ್ನು ನಾವು ಕೂಡ ದೊಡ್ಡ ಜವಾಬ್ದಾರಿಯನ್ನು ನಮ್ಮ ಇರುತ್ತದೆ ಹಾಗೂ ಚೀ ಪ್ಲೇಸ್ ಟು ಮನೆಗಳ ಸಮಸ್ಯೆಯನ್ನು ಸರ್ಕಾರದಿಂದ ಅನುಮೋದನೆ ನಾನು ತರುತ್ತೇನೆ ಎಂದು

ಸಭೆಯಲ್ಲಿ ಹೇಳಿರುವ ಶಾಸಕರು ಜಿಟಿ ಹರೀಶ್ ಗೌಡ ನಮಗೆ ಸಂತೋಷದ ವಿಷಯ ನಾವು ಅವರ ಜೊತೆ ಆಶ್ರಯ ಸಮಿತಿಯ ವಿಚಾರಕ್ಕೆ ನಾವು ಸಂಪೂರ್ಣವಾಗಿ ಆಸರೆಯಾಗಿ ನಾವು ನಾಮನಿರ್ದೇಶಕರು ಬೆಂಬಲವಾಗಿ ಹಾಗೂ ಶಕ್ತಿಯಾಗಿ ಇರುತ್ತವೆ ಎಂದ ತಿಳಿಸಿದರು

## 12ನೇ ಅಂತಾರರಾಷ್ಟ್ರೀಯ ಯೋಗ ದಿನಾಚರಣೆ

# ಸದಸ್ಯರಾಗಿ ಅನಂತ ಬಿರಾದಾರ ನೇಮಕ

• ಮಲ್ಲಮ್ಮ ನುಡಿ ವಾರ್ತೆ ಬೀದರ



ಜೂನ್ 21, 2026 ರಂದು ನಡೆಯಲಿರುವ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ (ಐಆಜ) 2026ರ ಕಾರ್ಯಕ್ರಮಗಳನ್ನ ದೇಶಾದ್ಯಂತ ಯಶಸ್ವಿಆಯೋಜನೆಗಾಗಿ ಆಯುಶ್ ಇಲಾಖೆಯ ಅಡಿಯಲ್ಲಿ ರಚಿಸಲಾದ ಅಂತರ–ಸಚಿವಾಲಯ ಸಮಿತಿಯ ಸದಸ್ಯರಾಗಿ ಅಂತರರಾಷ್ಟ್ರೀಯ ಪ್ರಕೃತಿ ಚಿಕಿತ್ಸಾ ಸಂಸ್ಥೆಯ (ಐಓಔ) ರಾಷ್ಟ್ರೀಯ ಅಧ್ಯಕ್ಷರು ಬೀದರ ಜಿಲ್ಲೆಯವರಾದ ಅನಂತ ಬಿರಾದಾರ ಅವರು ನೇಮಕಗೊಂಡಿದ್ದಾರೆ.

ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಕ್ಷೇತ್ರಕ್ಕೆ ಅನಂತ ಬಿರಾದಾರ ನೀಡುತ್ತಿರುವ ಅತ್ಯುತ್ತಮ ಕೊಡುಗೆಗಳು, ಅವರ ನಾಯಕತ್ವ ಗುಣ ಮತ್ತು ಸಮಾಜಮುಖಿ ಚಟುವಟಿಕೆಗಳಿಗೆ ಅವರ ನಿರಂತರ ಸೇವೆ ಹಾಗೂ ಸಮರ್ಪಣೆಯೆ ಸಾಕ್ಷಿಯಾಗಿದೆ.

ಈ ಮಹತ್ವದ ಜವಾಬ್ದಾರಿಯ ಮೂಲಕ, ಅವರು ರಾಷ್ಟ್ರಮಟ್ಟದಲ್ಲಿ ಯೋಗವನ್ನು ಪ್ರಚಾರ ಮತ್ತು ಪ್ರಸಾರ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ. ಅಂತರರಾಷ್ಟ್ರೀಯ ಪ್ರಕೃತಿ ಚಿಕಿತ್ಸೆ ಸಂಸ್ಥೆ (ಐಓಔ) ಪ್ರಕೃತಿ ಚಿಕಿತ್ಸೆ, ಯೋಗ ಮತ್ತು ಸಮಗ್ರ ಆರೋಗ್ಯದ ಪ್ರಚಾರ–ಕ್ಕೆ ಮೀಸಲಾಗಿರುವ ಪ್ರಮುಖ ಅಂತರರಾಷ್ಟ್ರೀಯ ಸಂಸ್ಥೆಯಾಗಿದ್ದು ಆರೋಗ್ಯಕರ ಜೀವನಶೈಲಿಯನ್ನು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ಜಾಗತಿಕವಾಗಿ ಯೋಗ ಮತ್ತು ಪ್ರಕೃತಿ ಚಿಕಿತ್ಸೆಯನ್ನು ಬಲಪಡಿಸುವುದು ಈ ಸಂಸ್ಥೆಯ ಮುಖ್ಯಧ್ಯೇಯವನ್ನಾಗಿಸಿಕೊಂಡು ಸೇವೆಗೈಯುತಿದ್ದಾರೆ.

ಈ ನಿಟ್ಟಿನಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯನ್ನು ದೇಶಾದ್ಯಂತ ಅತ್ಯಂತ ಯಶಸ್ವಿಯಾಗಿಸಲು (ಐಆಜ) 2026 ರ ಅಂತರ –ಸಚಿವಾಲಯ ಸಮಿತಿಗೆ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ರಾಚಪ್ಪಾ ಗೌಡಗಾಂವ ಗ್ರಾಮದ ನಿವಾಸಿಯಾದ ಅನಂತ ಬಿರಾದಾರ ಅವರು ನೇಮಕಗೊಂಡಿರುವುದಕ್ಕೆ ಐ.ಎನ್.ಓ ರಾಜ್ಯ ಸಂಚಾಲಕ ಗುರುನಾಥ ರಾಜಗೀರಾ, ರಾಜ್ಯ ಕಾರ್ಯದರ್ಶಿ ಯೋಗೇಂದ್ರ ಎದಲಾಪುರೆ, ಕೋಶಾಧ್ಯಕ್ಷರಾದ ಮನ್ಮತಯ್ಯಾಸ್ವಾಮಿ, ಜಿಲ್ಲಾಧ್ಯಕ್ಷರಾದ ಗೋರಖನಾಥ ಕುಂಬಾರ, ಪ್ರಧಾನ ಕಾರ್ಯದರ್ಶಿ ಸಂತೋಷ ಪಾಟೀಲ, ಜಿಲ್ಲಾ ಸಂಚಾಲಕಿ ಡಾ.ಮಂಜುಳಾ ಮುಚಳಂಬೆ ಹರ್ಷ ವ್ಯಕ್ತಪಡಿಸಿದ್ದಾರೆ.

# ಶಂಕರಾಚಾರ್ಯ ಜಯಂತಿ ಆಚರಣೆಗೆ ಸಿದ್ಧತೆ ಮಾಡಿಕೊಳ್ಳಿ: ಶಿವಾನಂದ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು



ದೇಶದಲ್ಲಿ ಸನಾತನ ಧರ್ಮದ ರಕ್ಷಣೆ ಮತ್ತು ತತ್ವ ಸಿದ್ಧಾಂತಗಳ ಪ್ರಚಾರಕ್ಕೆ ಹಗಲಿರುಳು ಶ್ರಮಿಸಿದ ಶ್ರೀ ಶಂಕರಾಚಾರ್ಯ ಜಯಂತಿಯನ್ನು ಜಿಲ್ಲಾಡಳಿತದಿಂದ ಅರ್ಥಪೂರ್ಣ ಹಾಗೂ ವಿಜೃಂಭಣೆಯಿಂದ ಆಚರಿಸಲು ಎಲ್ಲ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಶಿವಾನಂದ ಅವರು ತಿಳಿಸಿದರು.

ಏಪ್ರಿಲ್ 09ರ ಗುರುವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ಶ್ರೀ ಶಂಕರಾಚಾರ್ಯ ಜಯಂತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಏಪ್ರಿಲ್ 21ರ ಸಂಜೆ 5ಗಂಟೆಗೆ ನಗರದ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ವೇದಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದಕ್ಕೂ ಮುಂಚೆ ನಗರದ ಸರಾಫ್ ಉದ್ಯಾನವನ, ಜವಾಹರ ನಗರ ಶಾಲೆ, ಎಸ್.ಬಿ.ಐ. ಮಂದಿರದಿಂದ ವಾಸವಿ ವೃತ್ತ, ಹನುಮಾನ ಟಾಕೀಸ್ ದ್ವಾರ, ನಗರೇಶ್ವರ ದೇವಸ್ಥಾನ, ಚೌಡಮ್ಮಕಟ್ಟೆಯ ಮಾರ್ಗವಾಗಿ ಶಂಕರ ಮಠದವರೆಗೆ ಮೆರವಣಿಗೆ ನಡೆಯಲಿದೆ ಎಂದರು.

ಕಾರ್ಯಕ್ರಮಕ್ಕೆ ಪೊಲೀಸ್ ಬಂದೋಬಸ್ತ್, ಕಲಾ ತಂಡಗಳ ನೇಮಕ, ಉಪನ್ಯಾಸಕರು, ಆಮಂತ್ರಣ ಪತ್ರಿಕೆ, ವೇದಿಕೆ, ಧ್ವನಿ–ಬೆಳಕು, ಆಸನ, ಕುಡಿಯುವ ನೀರು, ಉಪಾಹಾರ, ವ್ಯವಸ್ಥೆಯನ್ನು ಅಧಿಕಾರಿಗಳು ಹಾಗೂ ಸಮಾಜದ ಮುಖಂಡರು ಸಮನ್ವಯದಿಂದ ಮಾಡಬೇಕೆಂದು ಸಲಹೆ ನೀಡಿದರು.

ಶ್ರೀ ಶಂಕರಾಚಾರ್ಯ ಜಯಂತಿಯನ್ನು ಎಲ್ಲ ಶಾಲಾ–ಕಾಲೇಜುಗಳಲ್ಲಿ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಆಚರಣೆ ಮಾಡಬೇಕೆಂದು ಸಂಬಂಧಿಸಿದ ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿಗಳು ಸೂಚಿಸಿದರು.

ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗುವಂತೆ ಅಪರ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಮನವಿ ಮಾಡಿದರು.

ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಉತ್ತರಾದೇವಿ, ಸಮಾಜದ ಮುಖಂಡರಾದ ಸಿ.ವಸಂತ ರಾವ್, ಕೃಷ್ಣಮೂರ್ತಿ ಹೆಬಸೂರು, ಹೆಚ್.ಹನುಮಂತ, ಶಿವಪ್ರಸಾದ್, ರಮೇಶ ಕುಮಾರ್, ಚಂದ್ರಶೇಖರ ವಿದ್ಯಾ, ವಿಷ್ಣುವರ್ಧನ, ವಿನೋಧ ಸಾಗರ್, ಜಯ ಕುಮಾರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಇದ್ದರು.

# ರಾಜ್ಯ ಮಟ್ಟ ಪ್ರಶಸ್ತಿಗೆ ಶಿವರಾಜ ಸುಂಕದ ಭಾಜನ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಮಟ್ಟದ ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿಗೆ ಆಯ್ಕೆಯಾದ ಮುದಗಲ್ ಪಟ್ಟಣ ವರದಿಗಾರ ಶಿವರಾಜ ಸುಂಕದ ಹಾಗೂ ಅವರ ಧರ್ಮ ಪತ್ನಿಯವರಿಗೆ ಲಿಂಗಸುಗೂರ ತಾಲ್ಲೂಕ ಘಟಕ ವತಿಯಿಂದ ಸನ್ಮಾನ ಮಾಡಿ ಕಾರ್ಯಕ್ರಮಕ್ಕೆ ಆಹ್ವಾನಿಸಿ ಕರೆ ನೀಡಲಾಯಿತು.

ಇದೆಸಂದರ್ಭದಲ್ಲಿ ರಾಯಚೂರು ಜಿಲ್ಲಾ ಕಾರ್ಯದರ್ಶಿ ರಾಘವೇಂದ್ರ ಗುಮಾಸ್ತೆ ಎ.11ಹಾಗೂ 12ರಂದು ಬೀದರನಲ್ಲಿ ಜರುಗುವ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ಸಹಕುಟುಂಬ ಪರಿವಾರ ಸಮೇತ ಆಗಮಿಸಬೇಕೆಂದು ಶುಭಾ ಹಾರೈಕೆ ಮಾಡಿದರು.

ತಾಲೂಕಾಧ್ಯಕ್ಷ ಶಿವರಾಜ ಕೆಂಬಾವಿ, ಹಿರಿಯ ವರದಿಗಾರ ಲಕ್ಷ್ಮಣ್ಣ ಬಾರಿಕೇರ, ನಾಗರಾಜ ಗೊರೇಬಾಳ, ಚಂದ್ರಶೇಖರ ಗಂಗಾವತಿ, ಅಮ್ಜದ್ ಕಂದಗಲ್, ಶಶಿಧರ ಕಂಚಿಮಠ, ಬಸವರಾಜ ಹೂನೂರು, ಬಸವರಾಜ ಬೈಲಗುಡ್ಡ, ಸುರೇಶ ಕೆ. ವಿಶ್ವಕರ್ಮ, ವಾಹೀದ್ ಖುರೇಶಿ, ಮಂಜುನಾಥ್ ಕೊಳ್ಳಿ, ರೇವಣಪ್ಪ ಸುಂಕದ ಹಾಗೂ ಕುಟುಂಬಸ್ಥರು ಸೇರಿದಂತೆ ಇತರರಿದ್ದರು.

# ವಸತಿ ನಿಲಯ ಲೋಕಾರ್ಪಣೆ: ಖರ್ಗೆ



• ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ

ಕಲಬುರಗಿ ನಗರದ ಮೋಹನ್ ಲಾಡ್ಜ್ ಬಳಿ ಸಮಾಜ ಕಲಾಣ ಇಲಾಖೆಯಿಂದ ಎಸ್.ಸಿ.ಪಿ. ಯೋಜನೆಯಡಿ ನಿರ್ಮಿಸಲಾದ 650 ಲಕ್ಷ ರೂ. ವೆಚ್ಚದ 100 ವಿದ್ಯಾರ್ಥಿ ಸಾಮರ್ಥ್ಯದ ಮೆಟ್ರಿಕ್ ನಂತರ ಬಾಲಕೀಯರ ವಸತಿ ನಿಲಯ ಮತ್ತು 536 ಲಕ್ಷ ರೂ. ವೆಚ್ಚದ 100 ವಿದ್ಯಾರ್ಥಿ ಸಾಮರ್ಥ್ಯದ ಮೆಟ್ರಿಕ್ ಪೂರ್ವ ಬಾಲಕರ ವಸತಿ ನಿಲಯವನ್ನು ಶುಕ್ರವಾರ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು.

ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಡಿ.ಸಿ. ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಸಹಾಯಕ ಆಯುಕ್ತೆ ಸಾಹಿತ್ಯ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಪ್ರೀತಿ ದೊಡ್ಡಮನಿ, ಲೋಕೋಪಯೋಗಿ ಇಲಾಖೆಯ ಕಲಬುರಗಿ ವಲಯ ಮುಖ್ಯ ಇಂಜಿನೀಯರ್ ಶರಣಪ್ಪಾ ಸುಲಗುಂಟೆ, ಇ.ಇ. ರಾಹುಲ ಕಾಂಬಳೆ ಇದ್ದರು.

# ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ: ಸಾರ್ವಜನಿಕರು ಭಾಗವಹಿಸುವಂತೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಏಪ್ರಿಲ್ 14ರಂದು ಭಾರತರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜನ್ಮ ದಿನಾಚರಣೆ ಯನ್ನು ಆಚರಿಸಲಾಗುತ್ತಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಮುಖಂಡರು, ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.ಅಂದು ಬೆಳಿಗ್ಗೆ 9:30 ಗಂಟೆಗೆ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿಗೆ ಪೂಜೆ ಹಾಗೂ ಮಾಲಾರ್ಪಣೆ ಕಾರ್ಯಕ್ರಮ ನಡೆಯಲಿದೆ. ನಂತರ ರಂಗಮಂದಿರದವರೆಗೆ ಮೆರವಣಿಗೆ ಮಾಡಲಾಗುವುದು. ಬೆಳಿಗ್ಗೆ 11ಗಂಟೆಗೆ ಶ್ರೀ ಪಂಡಿತ್ ಸಿದ್ದರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ಮತ್ತು ಕುವೆಂಪು ಕನ್ನಡ ಅಧ್ಯಯನದ ನಿರ್ದೇಶಕರಾದ ಡಾ.ಬಿ.ಎಂ.ಪುಟ್ಟಯ್ಯ ಅವರಿಂದ ಉಪನ್ಯಾಸ ಕಾರ್ಯಕ್ರಮವಿದ್ದು, ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಮಾಜದ ಎಲ್ಲಾ ಮುಖಂಡರು, ವಿವಿಧ ಸಂಘ–ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ,12ಕ್ಕೆ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ 110/11 ಕೆವಿ ವಡವಟ್ಟಿ ವಿದ್ಯುತ್ ಉಪ–ಕೇಂದ್ರದ ಸಿಂಗನೋಡಿ, ಬಾಪೂರು, ಮಂಡ್ಲಗೇರಾ, ಬಾಯಿದೊಡ್ಡಿ, ಸಿಂಗನೋಡಿ ತಾಂಡ ತುರ್ತು ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವ ಪ್ರಯುಕ್ತ ಏಪ್ರಿಲ್ 12ರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಗ್ರಾಹಕರಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಧಾನಸಭಾ ಚುನಾವಣೆಗೆ

# ನಾನೇ ಬಿಜೆಪಿ ಅಭ್ಯರ್ಥಿ: ಪಾಟೀಲ್



• ಮಲ್ಲಮ್ಮ ನುಡಿ ವಾರ್ತೆ, ಮಸ್ಕಿ

ಮುಂಬರುವ ವಿಧಾನಸಭಾ ಚುನಾವಣೆಗೆ ಮಸ್ಕಿ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿ ಪಕ್ಷದ ಅಭ್ಯರ್ಥಿಯಾಗಿ ನಾನೇ ಅಭ್ಯರ್ಥಿ ಸ್ಪರ್ಧಿಸುತ್ತೇನೆ ಎಂದು ಮಾಜಿ ಶಾಸಕ ಪ್ರತಾಪಗೌಡ ಪಾಟೀಲ್ ಅವರು ಹೇಳಿದರು.

ಶುಕ್ರವಾರ ಬಸವೇಶ್ವರ ನಗರದ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಈಗಾಗಲೇ ಮಸ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದಿಂದ ಪ್ರತಾಪ್ ಗೌಡ ಪಾಟೀಲ್ ಅವರು ಸ್ಪರ್ಧೆ ಮಾಡುವುದಿಲ್ಲ ಎಂದು ಊಹಾಪಹಗಳು ಕೇಳಿ ಬರ್ತಿದ್ದು ಮುಂದಿನ ವಿಧಾನಸಭಾ ಚುನಾವಣೆಗೆ ನಾನೇ ಅಭ್ಯರ್ಥಿಯನ್ನು ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಬಿಜೆಪಿ ಪಕ್ಷದ ವರಿಷ್ಠರಿಂದ ಸಂಪೂರ್ಣ ಸ್ಪಷ್ಟನೆ ಇದ್ದು ಮಸ್ಕಿ ವಿಧಾನಸಭಾ ಕ್ಷೇತ್ರದ ವಿವಿಧ ಗ್ರಾಮೀಣ ಭಾಗದ ಕಾರ್ಯಕರ್ತರು ಊಹಾಪೋಹದ ಮಾತುಗಳಿಗೆ ತಲೆ ಕೊಡಬೇಡಿ ಎಂದು ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಅವರು ತಮ್ಮ ಕಾರ್ಯಕರ್ತರಿಗೆ ಈ ಪತ್ರಿಕೆಯ ಮೂಲಕ ಸ್ಪಷ್ಟನೆ ನೀಡಿದರು .

ಇದೇ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ವೀರನಗೌಡ ಲೆಕ್ಕಿಹಾಳ,ಮಸ್ಕಿ ತಾಲೂಕ ಮಂಡಲ ಅಧ್ಯಕ್ಷ ಶರಣಯ್ಯ ಸೊಪ್ಪಿಮಠ,ಪುರಸಭೆ ಅಧ್ಯಕ್ಷ ಸುರೇಶ ಹರಸೂರು,ಬಸವತರಾಯ ಕುರಿ,ಮಲ್ಲಪ್ಪ ಅಂಕುಶದೊಡ್ಡಿ,ವೆಂಕಟೇಶ ಗುಡಿಸಲಿ,ಬಸವರಾಜ ವಕೀಲ ಮತ್ತು ಇನ್ನಿತರ ಬಿಜೆಪಿ ಕಾರ್ಯಕರ್ತರು ಇದ್ದರು.

# ವಿಶೇಷಚೇತನರಿಗೆ ಸಾಧನ ಸಲಕರಣೆ ವಿತರಣೆ: ವರ್ಷದಲ್ಲಿ ಬ್ಲೈಂಡ್ ಶಾಲೆ ಲೋಕಾರ್ಪಣೆ: ಖರ್ಗೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಕಲಬುರಗಿ ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದ ಎದುರುಗಡೆ ನಿರ್ಮಾಣದ ಹಂತದಲ್ಲಿರುವ ಅಂಧ ಮಕ್ಕಳ ಶಾಲೆ ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಿ ಲೋಕಾರ್ಪಣೆ ಮಾಡಲಾಗುವುದು ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐ.ಟಿ–ಬಿ.ಟಿ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಶುಕ್ರವಾರ ಇಲ್ಲಿನ ಜಿಲ್ಲಾಧಿಕಾರಿಗಳ ಕಚೇರಿ ಅವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಲ ಅಭಿವೃದ್ಧಿ ಇಲಾಖೆ, ವಿಕಲಚೇತನ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಹುಡ್ಕೋ ಸಂಸ್ಥೆ, ಅಲಿಮ್ಕೋ ಸಂಸ್ಥೆ ಸಂಯುಕ್ತಾಶ್ರಯದಲ್ಲಿ 2025–26ನೇ ಸಾಲಿನ ಶೇ.5 ಅನುದಾನ, ಡಿ.ಎಂ.ಎಫ್, ಸಿ.ಎಸ್.ಆರ್ ಹಾಗೂ ಇತರೆ ಅನುದಾನದಡಿ ವಿಶೇಷಚೇತನರಿಗೆ ಸುಮಾರು 2.63 ಕೋಟಿ ರೂ. ಮೊತ್ತದಲ್ಲಿ ತ್ರಿಚಕ್ರವಾಹನ, ಬುದ್ಧಿ ಮಾಂದ್ಯ ಮಕ್ಕಳಿಗೆ ಟಿ.ಎಲ್.ಎಂ ಕಿಟ್, ವೀಲ್ ಚೇರ್, ಬೆನ್ನು ನೋವಿನವರಿಗೆ ಮೆಡಿಕಲ್ ಕಿಟ್, ವಿಶೇಷಚೇತನರಿಗೆ ಬ್ರೈಲ್ ಕಿಟ್ ಟೈಪಿಂಗ್, ಶ್ರವಣ ದೋಷ ಯಂತ್ರ ಹಾಗೂ ರೀಡಿಂಗ್ ಯಂತ್ರ, ಟೇಬಲ್, ಬ್ಯಾಟರಿ ಆಪರೇಟೇಡ್ ಮೋಟೋರೈಸಡ್ ಟ್ರೈ ಸೈಕಲ್ ಹಾಗೂ ಇತ್ಯಾದಿ ಸಾಧನ ಸಲಕರಣೆಗಳ ವಿತರಣೆ ಮಾಡಿ ಅವರು ಮಾತನಾಡಿದರು.

60 ವರ್ಷ ಹಳೆಯದಾದ ಅಂಧ ಬಾಲಕ ಶಾಲೆ ಕಟ್ಟಡಕ್ಕೆ ಡಾ.ಮಲ್ಲಿಕಾರ್ಜುನ ಖರ್ಗೆ ಅವರು ಒಮ್ಮೆ ಇದರ ಪುನರ್ ನವೀಕರಣ ಮಾಡಿದು ಬಿಟ್ಟರೆ ಇದೂವರೆಗೆ ಯಾರು ಆಕಡೆ ತಿರುಗಿಯೂ ನೋಡಿಲ್ಲ. ಇದೀಗ ನಮ್ಮ ಸರ್ಕಾರ ಅಂಧ ಮಕ್ಕಳ ಹಿತದೃಷ್ಠಿಯಿಂದ ಕೂಡಲೆ ಶಾಲೆ ಕಾಮಗಾರಿ ಪೂರ್ಣಗೊಳಿಸಲು ನಿರ್ಧರಿಸಿದ್ದೇವೆ ಎಂದರು.

ಹುಟ್ಟಿನಿಂದ ವಿಶೇಷಚೇತನರು ದೈಹಿಕ ಅಂಗವಿಕಲರಿದ್ದರು, ಅವರಲ್ಲಿ ಬದುಕವ ಮತ್ತು ಜೀವನದಲ್ಲಿ ಏನಾದರು ಸಾಧಿಸುವ ಹುಮ್ಮಸ್ಸಿಗೆ ಕೊರತೆ ಇಲ್ಲ. ನವೋದ್ಯಮ ಸ್ಥಾಪಿಸಲು ಮುಂದೆ ಬರುವ ಕಂಪನಿಗಳ ಮುಖ್ಯಸ್ಥರನ್ನು ನೋಡಿದಾಗ ಕೆಲವರಲ್ಲಿ ಅಂಗವಿಕಲ ದೋಷಗಳಿರುವುದನ್ನು ಕಂಡಿರುವೆ. ಆದರು ಅವರು ಛಲ ಬಿಡದೆ ಜೀವನದಲ್ಲಿ ಮುನ್ನುಗ್ಗುತ್ತಿದ್ದಾರೆ. ಸರ್ಕಾರದ ಆರ್ಥಿಕ ಸಹಾಯ ಪಡೆದು ಸ್ವಾಭಿಮಾನದ ಜೀವನ ನಡೆಸುತ್ತಿದ್ದಾರೆ. ನನ್ನ ಇಲಾಖೆಯಿಂದನೆ 30–35 ಲಕ್ಷ ರೂ. ವರೆಗೆ ನವೋದ್ಯಮಕ್ಕೆ ಸಹಾಯಧನ ನೀಡಿದ್ದೇನೆ. ಇದರಿಂದ ವಿಕಲಚೇತನರೂ ಕೂಡಾ ಆರ್ಥಿಕವಾಗಿ ಸಬಲರಾಗುತ್ತಾರೆ. ಅವಕಾಶ ವಂಚಿತರಿಗೆ ಅವಕಾಶ ಕಲ್ಪಿಸುವ ಮಾತೃ ಹೃದಯ, ಸಹಾನುಭೂತಿ ಆಳುವ ಸರ್ಕಾರಕ್ಕೆ ಇರಬೇಕು, ಅದು ನಮ್ಮ ಸರ್ಕಾರಕ್ಕಿದೆ ಎಂದರು.

ವಿಶೇಷಚೇತನರಿಗೆ ಕೇವಲ ತ್ರಿಚಕ್ರವಾಹನ, ಸಾಧನ ಸಲಕರಣೆ ಕೊಟ್ಟರೆ ಸಾಲದು. ವಿಶೇಷಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತಂದು ಅವರು ಸಹ ಇತರರಂತೆ ಸ್ವಾಭಿಮಾನದ ಬದುಕು ಸಾಗಿಸಲು ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಅವರಿಗೆ ಕೌಶಲ್ಯ ಶಿಕ್ಷಣ, ತರಬೇತಿ ನೀಡುವ ಅಗತ್ಯವಿದೆ. ಹೀಗಾಗಿ ಐ.ಟಿ.–ಬಿ.ಟಿ. ಇಲಾಖೆಯು ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ ವಿಶೇಷಚೇತನರಿಗೆ ಕೌಶಲ್ಯ ಶಿಕ್ಷಣ ನೀಡಲು ಸೆಂಟರ್ ಆಫ್ ಎಕ್ಸಿಲೆನ್ಸ್ ಆಫ್ ಅಸಿಸ್ಟಿವ್ ಟೆಕ್ನಾಲೋಜಿ ಸ್ಥಾಪಿಸಲು ಮುಂದಾಗಿದ್ದು, ಅದಕ್ಕೆ ಕಲಬುರಗಿಯಲ್ಲಿ ಮೊದಲ ಪ್ರಾಯೋಗಿಕವಾಗಿ ಆರಂಭಿಲಾಗುವುದು, ಇದಕ್ಕೆ ವಿಕಲಚೇತನ ಇಲಾಖೆ ಮುಂದಾಗಬೇಕು ಎಂದರು.

ಡಿಸೇಬಲ್ ಡೇ ಕೇರ್ ಆರಂಭ: ಡಿಸೇಬಲ್ ಮಕ್ಕಳನ್ನು ನೋಡಿಕೊಳ್ಳಲೆಂದೆ ಕಲಬುರಗಿಯಲ್ಲಿ ಡಿಸೇಬಲ್ ಡೇ ಕೇರ್ ಸೆಂಟರ್ ತೆರೆಯಲು ನಿರ್ಧರಿಸಿದ್ದು, ಈಗಾಗಲೆ ಭೂಮಿ ಗುರುತಿಸಿದ್ದು, ಕಟ್ಟಡದ ನೀಲಿ ನಕ್ಷೆ ಸಿದ್ದಪಡಿಸಲಾಗಿದೆ. ಮುಂದಿನ ಒಂದು ವರ್ಷದಲ್ಲಿ ಇದು

ತಲೆ ಎತ್ತಲಿದೆ. ಇದರಿಂದ ಪೋಷಕರು ವಿಶೇಷಚೇತನ ಮಕ್ಕಳನ್ನು ಇಲ್ಲಿ ಬಿಟ್ಟು ತಮ್ಮ ದೈನಂದಿನ ಕೆಸಲಕ್ಕೆ ಹೋಗಬಹುದು. ಮಕ್ಕಳನ್ನು ನೋಡಲು ಇಲ್ಲಿ ಕೇರ್ ಟೇರ್ಸ್ ಸಹ ಇರಲಿದ್ದಾರೆ. ನಮ್ಮದು ಮಾತೃ ಹೃದಯದ ಸರ್ಕಾರ, ಪ್ರತಿಯೊಬ್ಬರ ಬಗ್ಗೆ ಕಾಳಜಿ ವಹಿಸುತ್ತದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಒತ್ತಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ ಮಾತನಾಡಿ ತಮ್ಮ ದಕ್ಷಿಣ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ವರ್ಷ 50 ತ್ರಿಚಕ್ರ ವಾಹನ ವಿತರಿಸಲಾಗಿತ್ತು. ಇಂದಿಲ್ಲಿ ಪುನ: 50 ವಾಹನಗಳನ್ನು ಡಿ.ಎಂ.ಎಫ್ ಅನುದಾಡಿ ವಿತರಿಸಲಾಗುತ್ತಿದೆ. ಪಂಚ ಗ್ಯಾರಂಟಿ ಯೋಜನೆಗಳ ಜೊತೆ ಜೊತೆಗೆ ಸರ್ವ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಸರ್ಕಾರ ಶ್ರಮಿಸುತ್ತಿದೆ. ಶಿಕ್ಷಣ, ಆರೋಗ್ಯ, ಕ್ರೀಡಗೆ ಹೆಚ್ಚಿನ ಒತ್ತು ನೀಡಿದೆ. ಇಂದಿಲ್ಲಿ ವಸತಿ ನಿಲಯ ಉದ್ಘಾಟನೆ ಮಾಡಲಾಗುತ್ತಿದೆ. ಕ್ಷೇತ್ರದ ಹಡಗಿಲ ಹಾರುತಿ ಗ್ರಾಮದಲ್ಲಿ 30 ಕೋಟಿ ರೂ. ವೆಚ್ಚದಲ್ಲಿ ಕ್ರೀಡಾ ನಗರಿ ನಿರ್ಮಿಸಲಾಗುತ್ತಿದೆ. ಇದಲ್ಲದೆ ಕಲಬುರಗಿ ನಗರದಲ್ಲಿ ಮಹಿಳೆಯರಿಗೆ ಪ್ರತ್ಯೇಕ 30 ಕೋಟಿ ರೂ. ವೆಚ್ಚದಲ್ಲಿ ಸ್ಟೇಡಿಯಂ ಸಹ ಸ್ಥಾಪಿಸಲಾಗುತ್ತಿದೆ ಎಂದರು.

ಕರ್ನಾಟಕ ರೇಷ್ಮೆ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷರು ಹಾಗೂ ಕಲಬುರಗಿ ಉತ್ತರ ಶಾಸಕಿ ಕನೀಜ್ ಫಾತಿಮಾ, ವಿಧಾನ ಪರಿಷತ್ ಶಾಸಕ ತಿಪ್ಪಣ್ಣಪ್ಪ ಕಮಕನೂರ, ಕಲಬುರಗಿ ಮಹಾನಗರ ಪಾಲಿಕೆ ಮೇಯರ್ ವರ್ಷಾ ರಾಜೀವ ಜಾನೆ, ಉಪ ಮೇಯರ್ ತೃಪ್ತಿ ಎಸ್. ಅಲ್ಲದ, ಜೆಸ್ಕಾಂ ಅಧ್ಯಕ್ಷ ಪ್ರವೀಣ ಪಾಟೀಲ ಹರವಾಳ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಜಹರ್ ಆಲಂ ಖಾನ್, ಡಿ.ಸಿ.

ಬಿ.ಫೌಜಿಯಾ ತರನ್ನುಮ್, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಅಪರ ಜಿಲ್ಲಾಧಿಕಾರಿ ರಾಯಪ್ಪ ಹುಣಸಗಿ, ಮಹಾನಗರ ಪಾಲಿಕೆ ಆಯುಕ್ತ ಅವಿನಾಶ ಶಿಂಧೆ, ವಿಕಲಚೇತನರ ಕಲ್ಯಾಣಾಧಿಕಾರಿ ಸಾಧಿಕ ಹುಸೇನ್ ಸೇರಿದಂತೆ ಮತ್ತಿತರು ಇದ್ದರು.

# ಯೂರಿಯಾ ಖರೀದಿಗೆ ಆಧಾರ್ ಎಫ್‌ಐಡಿ ಕಡ್ಡಾಯ: ಸೋಮಸುಂದರ್




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಈ ಬಾರಿ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರನ್ನು ಕಾಳಸಂತೆ ಮಾರಾಟಕ್ಕೆ ಕಡಿವಾಣ ಹಾಕಲು. ವಿತರಣೆಯನ್ನು ವ್ಯವಸ್ಥಿತಗೊಳಿಸಲು ಕೃಷಿ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದೆ.

ಈ ನಿಟ್ಟಿನಲ್ಲಿ ನಿನ್ನೆ ಸಂಜೆ ನಗರದ ಬಿಡಿಎಎ ಸಭಾಂಗಣದಲ್ಲಿ ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಸಭೆಯನ್ನು ಕೃಷಿ ಇಲಾಖೆ ಹಮ್ಮಿಕೊಂಡಿತ್ತು.

ಸಭೆಯಲ್ಲಿ ಮಾತನಾಡಿದ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಸೋಮಸುಂದರ್ ಕೆ.ಎಂ. ಜಿಲ್ಲೆಯ ರೈತರು ಯೂರಿಯಾ ರಸಗೊಬ್ಬರ ಖರೀದಿಸುವಾಗ ಆಧಾರ್ ಕಾರ್ಡ್ ಅಥವಾ ರೈತ ಗುರುತಿನ ಸಂಖ್ಯೆ (ಎಫ್ ಐ ಡಿ) ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದು ಹೇಳಿದ್ದಾರೆ. 2026-27ನೇ ಸಾಲಿನಿಂದ ರಸಗೊಬ್ಬರ ಮಾರಾಟ ಪ್ರಕ್ರಿಯೆಯ ಮೇಲೆ ನಿಗಾ ಇರಿಸಲು ಇಲಾಖೆಯು ವಿಶೇಷ ಆಪ್ ಬಿಡುಗಡೆ ಮಾಡಿದೆ. ಚಿಲ್ಲರೆ ಗೊಬ್ಬರ ಮಾರಾಟಗಾರರು ಇನ್ನು ಮುಂದೆ ಈ ಆಪ್ ಮೂಲಕವೇ ರೈತರ ಆಧಾರ್ ಅಥವಾ ಎಫ್ ಐ ಡಿ ಸಂಖ್ಯೆಯನ್ನು ದಾಖಲಿಸಿ ಗೊಬ್ಬರ ವಿತರಿಸಬೇಕು. ಇದರಿಂದ ರಸಗೊಬ್ಬರ ದುರ್ಬಳಕೆಯಾಗುವುದನ್ನು ತಪ್ಪಿಸಬಹುದು ಎಂದು ಹೇಳಿದ್ದಾರೆ.

ಸಭೆಯಲ್ಲಿ ಕೃಷಿ ಇಲಾಖೆಯ ಎಸ್. ಎನ್. ಮಂಜುನಾಥ, ವಿಚಕ್ಷಣ ವಿಭಾಗದ ಜಂಟಿ ನಿರ್ದೇಶಕ ಎಸ್.ಶಿವಕುಮಾರ್, ಉಪ ನಿರ್ದೇಶಕ ಮೃತ್ಯುಂಜಯ,

ಕೃಷಿ ಪರಿಕರಗಳ ಮಾರಾಟಗಾರರ ಸಂಘದ ಜಿಲ್ಲಾ ಅಧ್ಯಕ್ಷ ಹೆಚ್. ತಿಮ್ಮನಗೌಡ ಸಿದ್ದಮ್ಮನಹಳ್ಳಿ, ಹಗರಿ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಪಾಲಯ್ಯ, ವಿಜ್ಞಾನಿ ಮಂಜುನಾಥ, ವಿತರಕರ ಸಂಘದ ಕಾರ್ಯದರ್ಶಿ ಶ್ರೀನಿವಾಸರೆಡ್ಡಿ ಮೊದಲಾದವರು ಪಾಲ್ಗೊಂಡಿದ್ದರು.

# ಬಳ್ಳಾರಿ ವಕ್ಫ್ ಬೋರ್ಡ್ ಅಧ್ಯಕ್ಷ ಸ್ಥಾನಕ್ಕೆ ಪಿಂಜಾರ್ ಸಮುದಾಯದ ಬೇಡಿಕೆ




• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಇಲ್ಲಿನ ಜಿಲ್ಲಾ ವಕ್ಫ್ ಬೋರ್ಡ್ ಅಧ್ಯಕ್ಷ ಸ್ಥಾನ ಹಲವು ತಿಂಗಳುಗಳಿಂದ ಖಾಲಿಯಾಗಿದ್ದು, ಇದುವರೆಗೆ ನೇಮಕಾತಿ ನಡೆಯದಿರುವುದು ಸ್ಥಳೀಯ ಮುಸ್ಲಿಂ ಸಮುದಾಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಕಳೆದ ಹಲವಾರು ದಶಕಗಳಿಂದ ವಕ್ಫ್ ಬೋರ್ಡ್ನಲ್ಲಿ ಕೆಲವೇ ಸಮುದಾಯಗಳಿಗೆ ಮಾತ್ರ ಅವಕಾಶ ಸಿಗುತ್ತಿದೆ ಎಂಬ ಆರೋಪ ಕೇಳಿಬಂದಿದೆ. ಸಮಾನ ಪ್ರತಿನಿಧಿತ್ವ ನೀಡಬೇಕು ಎಂಬ ಬೇಡಿಕೆ ಇದೀಗ ಜೋರಾಗಿದೆ. ಪಿಂಜಾರ್, ನದಾಫ್ ಸಮುದಾಯಕ್ಕೆ ಈ ಬಾರಿ ಅಧ್ಯಕ್ಷ ಸ್ಥಾನ ನೀಡಬೇಕು ಎಂದು ಸಮುದಾಯದ ಮುಖಂಡರು ಒತ್ತಾಯಿಸಿದ್ದಾರೆ.

ಜಮಾತ್-ಎ-ಮನ್ಸೂರಿ ಸಂಘಟನೆಗಳ ಬಳ್ಳಾರಿ ಜಿಲ್ಲಾ ಅಧ್ಯಕ್ಷ ಬಿ.ಎಂ. ರಫಿ ಈ ಕುರಿತು ಪತ್ರಿಕಾ ಹೇಳಿಕೆ ನೀಡಿ. ಪಿಂಜಾರ್/ನದಾಫ್ ಸಮುದಾಯವು ಸಮಾಜ ಸೇವೆ, ವಕ್ಫ್ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಆದರೂ ಪ್ರಮುಖ ಹುದ್ದೆಗಳಲ್ಲಿ ನಮ್ಮ ಸಮುದಾಯಕ್ಕೆ ಅವಕಾಶ ಸಿಗದಿರುವುದು ವಿಷಾದನೀಯ,

"ಸಮಾನ ಹಕ್ಕುಗಳ ಅಡಿಯಲ್ಲಿ ಈ ಬಾರಿ ನಮ್ಮ ಸಮುದಾಯದ ಅರ್ಹ ವ್ಯಕ್ತಿಗೆ ಅಧ್ಯಕ್ಷ ಸ್ಥಾನ ನೀಡಬೇಕು. ಸರ್ಕಾರ ನ್ಯಾಯಯುತ ನಿರ್ಧಾರ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟಕ್ಕೆ ಇಳಿಯಬೇಕಾಗುತ್ತದೆ," ಎಂದು ಎಚ್ಚರಿಸಿದ್ದಾರೆ.

# ಬಂಡಿಹಟ್ಟಿ ಮಹೇಶ್ ಕಬಳಿಸಿದ್ದ ಸರ್ಕಾರಿ ಜಮೀನು ಒತ್ತುವರಿ ತೆರವು



ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ಸರ್ಕಾರಿ ಜಮೀನು ಒತ್ತುವರಿ ತೆರವು ಕಾರ್ಯಾಚರಣೆ ಮಾಡುವಲ್ಲಿ ಬಳ್ಳಾರಿ ಜಿಲ್ಲಾಡಳಿತ ಯಶಸ್ವಿಯಾಗಿದೆ. ಬಳ್ಳಾರಿ ಹೊರವಲಯದ ಬಂಡಿಹಟ್ಟಿ ಪ್ರದೇಶದ ರೆಡ್ಡಿ ಕಾಂಪೌಂಡ್ ಸರ್ವೇ ನಂಬರ್ 318ರಲ್ಲಿ 3.13 ಎಕರೆ ಸರ್ಕಾರಿ ಭೂಮಿಯನ್ನು ಬಂಡಿಹಟ್ಟಿ ಮಹೇಶ್ ಒತ್ತುವರಿ ಮಾಡಿಕೊಂಡಿದ್ದನ್ನು ಜಿಲ್ಲಾ ಆಡಳಿತ ಇಂದು ತೆರವುಗೊಳಿಸಿದೆ.

ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ ಅವರು ಸಿಬ್ಬಂದಿಯೊಂದಿಗೆ ತೆರಳಿ. ಕೋಟ್ಯಾಂತರ ರೂಪಾಯಿ ಮೌಲ್ಯದ ಈ ಭೂಮಿಯನ್ನು ಕಾರ್ಯಾಚರಣೆಯಲ್ಲಿ ತೆರವುಗೊಳಿಸಿ ಸರ್ಕಾರದ ವಶಕ್ಕೆ ಪಡೆದಿದ್ದಾರೆ.

ಜಿಲ್ಲಾಧಿಕಾರಿಗಳ ಮಾರ್ಗದರ್ಶನದಂತೆ ಈ ಕಾರ್ಯಾಚರಣೆ ಮಾಡಿದೆ. ನಗರದಲ್ಲಿನ ಸರ್ಕಾರಿ ಜಮೀನು ಒತ್ತುವರಿ ಮಾಡಿರುವುದನ್ನು ಪತ್ತೆಹಚ್ಚಿ ತೆರವುಗಳಿಸಲು ಡಿಸಿ, ಎಡಿಸಿ, ಎಸಿ ಮೊದಲಾದವರನ್ನು ಒಳಗೊಂಡ ಸಮಿತಿ ಈ ಬಗ್ಗೆ ಪರಿಶೀಲನೆ ಮಾಡಿ ಈ ಪ್ರಕ್ರಿಯೆ ನಡೆಸಿದೆ.

ಇಂತಹ ಅನೇಕ ಪ್ರಕರಣಗಳಿದ್ದು ಇನ್ನು ಮುಂದೆ ಒತ್ತುವರಿ ತೆರವು ಕಾರ್ಯ ಮತ್ತೆ ಮುಂದುವರೆಯಲಿದೆಯಂತೆ.

# ಹೈನುಗಾರಿಕೆ ಎರೆಹುಳು ಗೊಬ್ಬರ ತಯಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ತರಬೇತಿ ಸಂಸ್ಥೆಯಲ್ಲಿ 18 ರಿಂದ 50 ವಯೋಮಿತಿಯ ಕೃಷಿ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ರೈತ ಯುವಕ ಯುವತಿಯರಿಗಾಗಿ ಏಪ್ರಿಲ್ ಕೊನೆಯ ವಾರದಲ್ಲಿ 12 ದಿನಗಳ ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ www.rsetihaliyal.orgºÁUÀÆhttps://forms.gle/5qMgpA1XhR4RaBbk8 ಲಿಂಕ್ ಮೂಲಕ ಅರ್ಜಿ ಸಲ್ಲಿಸಿ, ಅಭ್ಯರ್ಥಿಗಳು ತಮ್ಮ ಹೆಸರು ಮತ್ತು ವಿಳಾಸವನ್ನು ನೋಂದಾಯಿಸಿಕೊಳ್ಳಬಹುದು. ತರಬೇತಿ ಅವಧಿಯಲ್ಲಿ ಊಟ ವಸತಿ ಸಂಪೂರ್ಣ ಉಚಿತವಾಗಿರುತ್ತದೆ. ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ಕೌಶಲ್ಯ, ಸಾಧನಾ ಪ್ರೇರಣಾ ತರಬೇತಿ, ಉದ್ಯಮಶೀಲತೆಯ ದಕ್ಷ ಗುಣಗಳು, ಹೊಸ ಉದ್ಯಮದ ಸ್ಥಾಪನೆ ಬಗ್ಗೆ, ಮಾಹಿತಿ ಮಾರುಕಟ್ಟೆ ಸಮೀಕ್ಷೆ, ಮಾರಾಟದ ತಂತ್ರಗಳು, ಯಶಸ್ವಿ ಉದ್ಯಮಗಳಿಂದ ಅನುಭವ ಹಂಚಿಕೆ, ಕ್ಷೇತ್ರ ಭೇಟಿ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ, ಬ್ಯಾಂಕಿನಿಂದ ಸಾಲ ಪಡೆದು ಸ್ವಉದ್ಯೋಗ ಪ್ರಾರಂಭಿಸಲು ಬೇಕಾದ ಜ್ಞಾನ, ಸರ್ಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಗಳನ್ನು ಉಚಿತವಾಗಿ ನೀಡಲಾಗುವುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8970145354, 9483485489, ನ್ನು ಸಂಪರ್ಕಿಸಬಹುದು ಎಂದು ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೆಲ್ ಫೋನ್ ರಿಪೇರಿ ಸರ್ವಿಸ್ ತರಬೇತಿಗೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಹಳಿಯಾಳ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ತರಬೇತಿ ಸಂಸ್ಥೆಯಲ್ಲಿ 18 ರಿಂದ 50 ವಯಸ್ಸಿನ ಗ್ರಾಮೀಣ ಭಾಗದ ನಿರುದ್ಯೋಗ ಯುವಕ ಯುವತಿಯರಿಗಾಗಿ ಮೇ ತಿಂಗಳ ಕೊನೆಯ ವಾರದಲ್ಲಿ 31 ದಿನಗಳ ಸೆಲ್ ಫೋನ್ ರಿಪೇರಿ ಮತ್ತು ಸರ್ವಿಸ್ ಉಚಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು www.rsetihaliyal.orgºÁUÀÆhttps://forms.gle/m4pcmpritDevbwug9 ಲಿಂಕ್ ಮೂಲಕ ಅರ್ಜಿ ಸಲ್ಲಿಸಿ, ತಮ್ಮ ಹೆಸರು ಮತ್ತು ವಿಳಾಸವನ್ನು ನೋಂದಾಯಿಸಿಕೊಳ್ಳಬಹುದು. ತರಬೇತಿ ಅವಧಿಯಲ್ಲಿ ಊಟ ವಸತಿ ಸಂಪೂರ್ಣ ಉಚಿತವಾಗಿರುತ್ತದೆ. ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ನುರಿತ ಮಾರ್ಗದರ್ಶಕರಿಂದ ಪ್ರಾಯೋಗಿಕ ತರಬೇತಿ, ಥಿಯರಿ ಮತ್ತು ಪ್ರ್ಯಾಕ್ಟಿಕಲ್ ಅವಧಿಗಳು, ಸಾಧನಾ ಪ್ರೇರಣೆ ತರಬೇತಿ, ಉದ್ಯಮಶೀಲತೆಯ ದಕ್ಷ ಗುಣಗಳು, ಹೊಸ ಉದ್ಯಮದ ಸ್ಥಾಪನೆ ಬಗ್ಗೆ ಮಾಹಿತಿ, ಮಾರುಕಟ್ಟೆ ಸಮೀಕ್ಷೆ, ಮಾರಾಟದ ತಂತ್ರಗಳು, ಯಶಸ್ವಿ ಉದ್ಯಮಗಳಿಂದ ಅನುಭವ ಹಂಚಿಕೆ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ, ಬ್ಯಾಂಕಿನಿಂದ ಸಾಲ ಪಡೆದು ಸ್ವಉದ್ಯೋಗ ಪ್ರಾರಂಭಿಸಲು ಬೇಕಾದ ಜ್ಞಾನ, ಸರ್ಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಗಳನ್ನು ಉಚಿತವಾಗಿ ನೀಡಲಾಗುವುದು.

# ಸಿದ್ಧಲಿಂಗೇಶ್ವರ ಶಿವಯೋಗಿಗಳು ಐತಿಹಾಸಿಕ ಪುರುಷರು



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಿರುಗುಪ್ಪ: 'ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳು ಐತಿಹಾಸಿಕ ಪುರುಷರು' ಎಂದು ಪಾಲ್ತೂರು ಕಲ್ಲುಹೊಳೆ ಸಂಸ್ಥಾನ ಮಠದ ಚನ್ನವೀರ ಶಿವಾಚಾರ್ಯ ಸ್ವಾಮೀಜಿಗಳು ತಿಳಿಸಿದರು. ತಾಲ್ಲೂಕಿನ ನಾಗರಹಾಳು ಗ್ರಾಮದ ಶ್ರೀಬೃಹನ್ಮಠದಲ್ಲಿ ಏಕೀಕರಣ ಹೋರಾಟಗಾರರಾದ ಲಿಂಗೈಕ್ಯ ಶರಣ ದೊಡ್ಡಯ್ಯಶಾಸ್ತ್ರಿಗಳ ಮತ್ತು ಲಿಂಗೈಕ್ಯ ಬಸವಮ್ಮ ಅವ್ವನವರ ಪುಣ್ಯಾರಾಧನೆ ಮತ್ತು ರಥೋತ್ಸವ ಅಂಗವಾಗಿ ಹಮ್ಮಿಕೊಂಡಿರುವ ಎಡೆಯೂರು ತೋಂಟದ ಸಿದ್ಧಲಿಂಗೇಶ್ವರ ಶಿವಯೋಗಿಗಳ ಪುರಾಣ ಪ್ರವಚನ ಉದ್ಘಾಟಿಸಿ,

ಲೋಕದ ಜನರ ಅಧರ್ಮ, ಅನ್ಯಾಯಗಳನ್ನು ತಿದ್ದುವುದಕ್ಕೋಸ್ಕರ ಸಿದ್ಧಲಿಂಗೇಶ್ವರರು ಉದಯಿಸಿದರು ಎಂದು ಅಭಿಪ್ರಾಯಪಟ್ಟರು. 'ನೈತಿಕ, ಧಾರ್ಮಿಕ, ತಾತ್ವಿಕ ಚಿಂತನೆಗಳನ್ನು ಜಾಗೃತಗೊಳಿಸಿದವರು ಸಿದ್ಧಲಿಂಗೇಶ್ವರರು' ಎಂದು ಆಂಧ್ರಪ್ರದೇಶದ ಆದೋನಿಯ ಮಂಡಗಿರಿ ಕಲ್ಮಠದ ಗುರುಸಿದ್ಧದೇವರು ತಿಳಿಸಿದರು.

ಗಡಿನಾಡ ಸಾಹಿತಿ ನಾ.ಮ. ಮರುಳಾರಾಧ್ಯರ ಪುರಾಣ ಪ್ರಚಚನ, ನಾ.ಮ. ಜಗದೀಶ್ ಗವಾಯಿಗಳ ಪುರಾಣ ವಾಚನ, ಧಾರವಾಡ ಪ್ರಸನ್ನಕುಮಾರ ಹಿರೇಮಠ ವಾಯೋಲಿನ್ಗೆ ವಂದಲಿ ಬಸವರಾಜ ಹೂಗಾರ್ ತಬಲಾಸಾಥ್ ನೀಡಿದರು. ಶರಣ ಬಸವರಾಜಯ್ಯತಾತ, ಶ್ರೀಕಂಠಯ್ಯತಾತ, ಎನ್.ಎಂ. ಕಲಿಗಣನಾಥ, ಚಂದ್ರಗೌಡ, ಹುಸೇನಪ್ಪ, ಹೊನ್ನೂರಸಾಬ್, ಶ್ರೀಮಠದ ಭಕ್ತರು, ಗ್ರಾಮಸ್ಥರು ಹಾಜರಿದ್ದರು

# ಕನ್ನಡ ಉಳಿಸಿ ಬೆಳೆಸುವ ಕಾರ್ಯ ನಿರಂತರವಾಗಲಿ: ಅರವಿಂದ್ ಪಟೀಲ್




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:

ನಗರದ ಪ್ರತಿಷ್ಠಿತ ವೀರಶೈವ ಮಹಾವಿದ್ಯಾಲಯದ ಕನ್ನಡ ವಿಭಾಗವು ಕವನ ಪ್ರಕಾಶನ ಕೊಟ್ಟೂರು ಇವರ ಸಂಯುಕ್ತ ಆಶ್ರಯದಲ್ಲಿ ನಿನ್ನೆ ಪುಸ್ತಕ ಬಿಡುಗಡೆ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮವು ಹಮ್ಮಿಕೊಳ್ಳಲಾಯಿತು. ವೀ ವಿ ಸಂಘದ ಕಾರ್ಯದರ್ಶಿ ಡಾ.ಅರವಿಂದ ಪಾಟೀಲ್, ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಕನ್ನಡ ಉಳಿಸಿ ಬೆಳೆಸುವ ಕಾರ್ಯ ನಿರಂತರವಾಗಲಿ ಎಂದು ಅಭಿಪ್ರಾಯಪಟ್ಟರು. ಕನ್ನಡ ಕಲಿಸಲು ಪ್ರಾಥಮಿಕ ಶಾಲೆಯಿಂದ ಹಿಡಿದು ವಿಶ್ವವಿದ್ಯಾಲಯಗಳವರೆಗೆ ಶಿಕ್ಷಕರ ಕೊರತೆ ಇದೆ. ಈ ಬಗ್ಗೆ ಸರ್ಕಾರ ತೀವ್ರ ಗಮನ ಹರಿಸಬೇಕೆಂದು ಎಂದು ನುಡಿದರು. ಅಖಂಡ ಬಳ್ಳಾರಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ 2025ನೇ ಸಾಲಿನ 'ಸಾಹಿತ್ಯಶ್ರೀ' ಪ್ರಶಸ್ತಿಗೆ ಭಾಜನರಾದ ನಿಷ್ಠಿರುದ್ರಪ್ಪ ಅವರ "ಸ್ವಾದ ಬೇಕ್ರಿ" ಪ್ರಬಂಧ ಸಂಕಲನ ಬಿಡುಗಡೆ ಕಾರ್ಯಕ್ರಮ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಕನ್ನಡದಲ್ಲಿ ಲಲಿತ ಪ್ರಬಂಧ ಬರೆಯುವ ಹವ್ಯಾಸವನ್ನು ಉಪನ್ಯಾಸಕವರ್ಗ ಮಾಡಿ ಕನ್ನಡದ ಸೇವೆಗೆ ಸಿದ್ಧರಾಗಬೇಕು. ಈ ಮೂಲಕ ಮುಂಬರುವ ಸಾಹಿತ್ಯ ಸಮ್ಮೇಳನ ಸಭಾಂಗಣದಲ್ಲಿ ತೊಡಗಬೇಕು ಎಂದರು. ಬೆಂಗಳೂರಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯ ಸಿ.ಬಿ. ಚಿಲ್ಕರಾಗಿ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿ, "ಸ್ವಾದ ಬೇಕ್ರೀ' ಕೃತಿಯು ಸ್ಥಳೀಯರನ್ನು, ಸ್ಥಳೀಯ ವಿಚಾರಗಳನ್ನೇ ಸ್ವಾದಿಷ್ಟವಾಗಿ ಬರೆದಿದ್ದಾರೆ. ವ್ಯಕ್ತಿನಿಷ್ಠವಾಗಿದ್ದ ಕೃತಿ ಉಳಿಯುವುದಿಲ್ಲ ಆದರೆ ವಸ್ತುನಿಷ್ಠವಾಗಿದ್ದು ಉಳಿಯುತ್ತದೆ ಇದಕ್ಕೆ ಸಾಕ್ಷಿ ಈ ಕೃತಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಲಲಿತ ಪ್ರಬಂಧಗಳ ವಿಷಯ ವಸ್ತು ಅಗಾಧವಾಗಿದ್ದು ಇದು ಆಳವಾದ ಚಿಂತನೆ ಹೊಂದಿವೆ. ಸ್ವಾದ ಇದ್ದರೆ ಮಾತ್ರ ಸುನಾದ ಹೊರಡುತ್ತದೆ. ಪ್ರತಿ ಹಳ್ಳಿಗಳ ಹರಟೆಕಟ್ಟೆಗಳು ಅನುಭವಿಗಳ ಅಪಾರ ಜ್ಞಾನ ಹಂಚಿಕೆ ಮಾಡುವ ಅನುಭವ ನೀಡುತ್ತವೆ' ಎಂದು ಕಥೆಗಾರ ವೀರೇಂದ್ರರಾವಿಹಾಳ್ ಪುಸ್ತಕ ಪರಿಚಯಿಸಿದರು. ಇದೇ ಸಂದರ್ಭದಲ್ಲಿ ಬಳ್ಳಾರಿಯ ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಅಬ್ದುಲ್ ಹೈ ತೋರಣಗಲ್ಲು, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತ ಭ್ರಮರಾಂಭ ಯಾಟಿ, ಶರಣಬಸವ, ಉತ್ತಮ ಎನ್. ಎಸ್.ಎಸ್. ಅಧಿಕಾರಿ ಪ್ರಶಸ್ತಿ ಪುರಸ್ಕೃತ ಇವರನ್ನು ಗೌರವಿಸಿ ಸನ್ಮಾನಿಸಲಾಯಿತು. ವೀರಶೈವ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಸಾಹುಕಾರ ಸತೀಶಬಾಬು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ನಮ್ಮ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ನಿಷ್ಠಿ ರುದ್ರಪ್ಪ ಮತ್ತು ಅಬ್ದುಲ್ ಹೈ ಅವರಿಗೆ ಸಾಹಿತ್ಯ ಶ್ರೀ ಪ್ರಶಸ್ತಿ ದೊರೆತಿರುವುದು ಹೆಮ್ಮೆಯ ಸಂಗತಿ ಎಂದರು. ನಿವೃತ್ತ ಪ್ರಾಚಾರ್ಯ ಜೆ ಜಯಪ್ರಕಾಶ ಗೌಡ, ಕಸಾಪ ಮಾಜಿ ಅಧ್ಯಕ್ಷ ಹಂಪನಗೌಡ, ಕವನ ಪ್ರಕಾಶನ ಸಂಸ್ಥೆಯ ಅಜಯ್ ಬಣಕಾರ, ಕಾಲೇಜು ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಕಾರದಪುಡಿ ಮುದ್ದನಗೌಡ ಭಾಗವಹಿಸಿದ್ದರು. ಪ್ರಾಂಶುಪಾಲರಾದ ಜಿ. ಮಲ್ಲನಗೌಡ ಸ್ವಾಗತಿಸಿದರು. ಡಾ. ನೀಲಮ್ಮ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ದ್ವಿತೀಯ ಪಿಯು ಕಾಮರ್ಸ್ ನಲ್ಲಿ 97% ಅಂಕ ಪಡೆದ ಶ್ರೇಯಾಂಕಿತ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ



ನಗರದ ಮೇಧಾ ಕಾಲೇಜಿನ ದ್ವಿತಿಯ ಪಿಯು ವಾಣಿಜ್ಯ(ಕಾಮರ್ಸ್) ವಿಭಾಗದಲ್ಲಿ 582 ಅಂಕಗಳಿಸುವ ಮೂಲಕ ಶೇ 97 ರಷ್ಟು ಸಾಧನೆ ಮಾಡಿದ್ದಾರೆ ಕೆ.ಎಚ್.ಎಂ.. ಶ್ರೇಯಾಂಕಿತ.

ಇವರು ನಗರದ ಖ್ಯಾತ ಜ್ಯೋತಿಷಿಗಳು ಹಾಗೂ ಶತಾಯುಷಿಗಳಾಗಿದ್ದ ಸೂಗಯ್ಯ ಶಾಸ್ತ್ರಿಗಳ ಕಿರಿಯ ಪುತ್ರ ಜ್ಯೋತಿಷಿ ಮಲ್ಲಿಕಾರ್ಜುನ ಸ್ವಾಮಿಯವರ ಕಿರಿಯ ಪುತ್ರಿಯಾಗಿದ್ದಾರೆ. 600 ಕ್ಕೆ 582 ಅಂಕಗಳನ್ನು ಪಡೆದು ಕಾಲೇಜಿಗೆ ಹಾಗೂ ಕುಟುಂಬಕ್ಕೆ ಕೀರ್ತಿ ತಂದಿದ್ದಾರೆ.

ಶ್ರೇಯಾಂಕಿತಳಿಗೆ, ಪಾಲಕ ಪೋಷಕರು, ಕಾಲೇಜಿನ ಆಡಳಿತ ಮಂಡಳಿ, ಸಿಬ್ಬಂದಿ, ಗುಲ್ಬರ್ಗ ವಿವಿಯ ಸೆನೆಟ್, ಸಿಂಡಿಕೇಟ್ ನ ಮಾಜಿ ಸದಸ್ಯ ಕೆ.ಎಂ.ಮಹೇಶ್ವರ ಸ್ವಾಮಿ ಅಭಿನಂದನೆ ಸಲ್ಲಿಸಿದ್ದಾರೆ.

# ಪಿಯು ಪರೀಕ್ಷೆಯಲ್ಲಿ ನಂದಿತಾಗೆ ಶೇ. 96



ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ:

ಪಟ್ಟಣದ ನ್ಯಾಯವಾದಿ ಪ್ರಭು ಎಂ ಕಂದಗಲ್ ಅವರ ಪುತ್ರಿ ನಂದಿತಾ ಪಿಯುಸಿ ಪರೀಕ್ಷೆಯಲ್ಲಿ ಶೇ. 96(576) ಅಂಕ ಗಳಿಸಿ ಮಂಗಳೂರಿನ ಎಕ್ಸ್‌ಪರ್ಟ ಪಿಯು ಕಾಲೇಜಿಗೆ ಕೀರ್ತಿ ತಂದಿದ್ದಾಳೆ.

# ಶಿಕ್ಷಕ ತರಬೇತಿ ಶಿಬಿರ ಆರಂಭ ಯೋಗಮಯ ಪಟ್ಟಣ ಮಾಡಲು ಕ್ರಮ

ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

: ಪಟ್ಟಣದ ಪತಂಜಲಿ ಯೋಗ ಸಮಿತಿ ವತಿಯಿಂದ ಪಟ್ಟಣದ ಈರಕಾರ ಮುತ್ಯಾನ ದೇವಸ್ಥಾನದ ಸಭಾಂಗಣದಲ್ಲಿ ಪಟ್ಟಣದ ಯೋಗ ಶಿಕ್ಷಕರಾದ ಕಾಶಿನಾಥ್ ಎಸ್ ಆರ್ ಟಿ ಅವರಿಂದ ಯೋಗ ತರಬೇತಿ ಆರಂಭವಾಗಿದೆ. ಕಿಸಾನ್ ರಾಜ್ಯ ಪ್ರಭಾರಿಗಳಾದ ಸಂಜಯ ಕುಸ್ಟಿಗಾರ ಹಾಗೂ ಎಸ್ ಕೆ ಹೊಳಪ್ಪನವರ ಗುರೂಜಿ ಯೋಗ ತರಬೇತಿ ಕುರಿತಾಗಿ ಮಾಹಿತಿ ನೀಡಿದರು. ಕೆಲವೇ ದಿನಗಳಲ್ಲಿ ಬಸವನ ಬಾಗೇವಾಡಿಯಲ್ಲಿ ಯೋಗ ಶಿಕ್ಷಕ ತರಬೇತಿ ಶಿಬಿರ ಪ್ರಾರಂಭ ಮಾಡಿ ಪಟ್ಟಣವನ್ನು ಯೋಗಮಯ ಮಾಡೋಣ. ಪ್ರತಿನಿತ್ಯ ರಾಜ್ಯ ಸಂಪನ್ಮೂಲ ಯೋಗ ಶಿಕ್ಷಕರಿಂದ ಯೋಗ ಜ್ಞಾನ ನಡೆಯಲಿದೆ. ನಿಮಿತ್ಯವಾಗಿ ಪೂರ್ವಭಾವಿಯಾಗಿ ಯೋಗ ಶಿಬಿರ ಪ್ರಾರಂಭವಾಗಿದ್ದು. ಹಲವು ಯೋಗ ಸಾಧಕರು ಶಿಬಿರದಲ್ಲಿ ಪಾಲ್ಗೊಳ್ಳುತ್ತಿದ್ದಾರೆ ಎಂದರು. ವಿವೇಕಾನಂದ ಕಲ್ಯಾಣಶೆಟ್ಟಿ,

ರಾಜಶೇಖರ ಪಾಟೀಲ, ಕೊಟ್ರೇಶ್ ಹೆಗಡ್ಯಾಳ, ಎನ್ ಎಸ್ ಹೂಗಾರ, ರುದ್ರಗೌಡ ಹಂಗರಗಿ, ಬಸವರಾಜ ಲೋಟಗೇರಿ, ಗ ಅನುಜಾ ಗೂಬ್ಬಾ, ಗಿರಿಜಾ ಪಾಟೀಲ, ಗೀತಾ ಗಬ್ಬೂರ, ಸುವರ್ಣಾ ಚಿತ್ತಾಪೂರ, ಮಹಾದೇವಿ ಬಿರಾದಾರ, ಮಹಾದೇವಿ ಗೊಳಸಂಗಿ, ಚನ್ನಮ್ಮ ಮಣ್ಣೂರ, ಶಾಂತಾ ಜೋಗಿ, ರೇಣುಕಾ ಗಬ್ಬೂರ, ಗಾಯತ್ರಿ ಪಾಟೀಲ, ವಿಜಯಲಕ್ಷ್ಮಿ ಧನಶೆಟ್ಟಿ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಪ್ರತಿನಿತ್ಯ ತಾಲೂಕಾ ಪ್ರಭಾರಿಗಳಾದ ಕಾಶೀನಾಥ ಅವಟಿ ಯೋಗ ತರಬೇತಿ ನೀಡುತ್ತಿದ್ದಾರೆ. ಸರ್ವರು ಈ ಶಿಬಿರದಲ್ಲಿ ಭಾಗವಹಿಸಿ ಶಿಬಿರ ಯಶಸ್ವಿಗೊಳಿಸಲು ಪತಂಜಲಿ ಯೋಗ ಕಾರ್ಯಧ್ಯಕ್ಷ ಪ್ರಭಾಕರ ಖೇಡದ ತಿಳಿಸಿದ್ದಾರೆ.



# ಲಕ್ಷ್ಮೀಗೆ ರಾಜಕ್ಕೆ ನಾಲ್ಕನೇ ರ‍್ಯಾಂಕ



ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ:

ತಾಲೂಕಿನ ಸೋಲವಾಡಗಿ ಗ್ರಾಮದ ಲಕ್ಮೀ ಬಸವರಾಜು ಬಿದರಕುಂದಿ ಪಿಯು ಪರೀಕ್ಷೆಯಲ್ಲಿ ಶೇ, 99.16( 595) ಅಂಕ ಪಡೆದು ರಾಜ್ಯಕ್ಕೆ 4ನೇ ಹಾಗೂ ಹಾಸನ ಜಿಲ್ಲೆಗೆ 2ನೇ ರ‍್ಯಾಂಕ ಗಳಿಸಿದ್ದಾಳೆ. ನಾಲ್ಕು ವಿಷಯದಲ್ಲಿ ನೂರಕ್ಕೆ ನೂರು ಅಂಕ ಗಳಿಸಿದ ಇವಳು ಹಾಸನದ ಮಾಸ್ಟರ್ಸ ಪಿಯು ಕಾಲೇಜಿನಲ್ಲಿ ಓದುತ್ತಿದ್ದಳು.

# ಕೆಂಭಾವಿ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ

• ಮಲ್ಲಮ್ಮ ನುಡಿ ವಾರ್ತೆ, ಕೆಂಭಾವಿ



ಪಟ್ಟಣದ ಸರಕಾರಿ ಪದವಿ ಪೂರ್ವ ಕಾಲೇಜು ಪಿಯುಸಿ ದ್ವಿತೀಯ ಪರೀಕ್ಷೆ – 1 ಫಲಿತಾಂಶದಲ್ಲಿ ಉತ್ತಮ ಫಲಿತಾಂಶ ಬಂದಿದ್ದು ಪ್ರಾಚಾರ್ಯರು ಹಾಗೂ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಒಟ್ಟು 194 ವಿದ್ಯಾರ್ಥಿಗಳಲ್ಲಿ 17 ವಿದ್ಯಾರ್ಥಿಗಳು ಡಿಸ್ಟಿಂಕ್ಷನ್, 91 ವಿದ್ಯಾರ್ಥಿಗಳು ಪ್ರಥಮ, 32 ವಿದ್ಯಾರ್ಥಿಗಳು ದ್ವಿತೀಯ ದರ್ಜೆ ಹಾಗೂ 22 ಪಾಸ್ ಸೇರಿದಂತೆ ಒಟ್ಟು 162 ವಿದ್ಯಾರ್ಥಿಗಳು ಉತೀರ್ಣರಾಗಿದ್ದು ಕಾಲೇಜಿಗೆ ಪ್ರತಿಶತ 83.51% ಫಲಿತಾಂಶ ಬಂದಿದೆ.

ವಿಭಾಗವಾರು ಫಲಿತಾಂಶ:

ಕಲಾ ವಿಭಾಗದಲ್ಲಿ 109 ವಿದ್ಯಾರ್ಥಿಗಳಪೈಕಿ95ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.83.16% ಫಲಿತಾಂಶ ಬಂದಿದೆ. ಕು. ಕಾವೇರಿ ಬೈಲಪ್ಪ ಪೂಜಾರಿ 562/600( ಶೇ.93.66%)

ಅಂಕಗಳನ್ನುಪಡೆದು ಕಾಲೇಜಗೆ ಪ್ರಥಮ ಸ್ಥಾನ ಪಡೆದಿದ್ದಾಳೆ.

ವಾಣಿಜ್ಯ ವಿಭಾಗದಲ್ಲಿ 25 ವಿದ್ಯಾರ್ಥಿಗಳಪೈಕಿ24ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.96.% ಪಲಿತಾಂಶ ಬಂದಿದೆ. ಕು. ಶಿಲ್ಪ ಸಂಗಣ್ಣ542/600(ಶೇ.90.33%) ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಪಡೆದಿದ್ದಾಳೆ.

ವಿಜ್ಞಾನ ಭಾಗದಲ್ಲಿ 52 ವಿದ್ಯಾರ್ಥಿಗಳ ಪೈಕಿ 43 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು ಶೇ.82.69%ಪಲಿತಾಂಶ ಬಂದಿದೆ.

ಕು. ಸೋನಿಯಾ ಮೊಹಮ್ಮದ್ ಸಾಬ್ 557/600 (ಶೇ.92.83%) ಅಂಕಗಳನ್ನು ಪಡೆದು ಕಾಲೇಜಿಗೆ ದ್ವಿತೀಯ ಹಾಗೂ ವಿಜ್ಞಾನ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾಳೆ.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಸಿಡಿಸಿ ಉಪಾಧ್ಯಕ್ಷ ಗುಂಡಭಟ ಜೋಶಿ, ಪ್ರಾಚಾರ್ಯರರಾದ ಅಶೋಕ್ ಕುಮಾರ್ ತಳಕೇರಿ,

ಉಪನ್ಯಾಸಕರಾದ ಬಸಣ್ಣ ಪೂಜಾರಿ,ವೀರೇಂದ್ರಧರಿ,ಉತ್ತಮ ಕುಮಾರ್,ರಾಮಣ್ಣ,ಬಸವರಾಜ್ (ಎಸ್ ಡಿ ಎ) ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

# ಮಕ್ಕಳ ಉಜ್ವಲ ಭವಿಷ್ಯಕ್ಕೆ ಪ್ರಾಮಾಣಿಕ ಪ್ರಯತ್ನ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣ ಜೈ ಭೀಮ ನಗರದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕಿ ನೀಲಮ್ಮ ಬಿ. ಮಲ್ಲೆ ಅವರು ಶುಕ್ರವಾರ ಕರ್ತವ್ಯಕ್ಕೆ ಹಾಜರಾದರು. ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಿಂದ ವರ್ಗಾವಣೆಗೊಂಡು ಬಂದ ಇವರನ್ನು ಶಾಲೆ ವತಿಯಿಂದ ಸನ್ಮಾನಿಸಿ ಬರಮಾಡಿಕೊಳ್ಳಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಿಕ್ಷಕಿ ನೀಲಮ್ಮ ಮಲ್ಲೆಯವರು, ಶಾಲೆಯ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ನನ್ನ ಶಕ್ತಿ ಮೀರಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಸವಣ್ಣೆಪ್ಪ ಮಾಳಳ್ಳಿಕರ್,

ಬಸವರಾಜ ಮಲ್ಲೆ, ರಾಜ್ ಅಹ್ಮದ್ ಬಡಿಗೇರ, ಮಂದಾಕಿನಿ ಹಾಗೂ ಎನ್‌ಜಿಓ ಸದಸ್ಯ ಮಲ್ಲಿಕಾರ್ಜುನ ಬಡಗೇರ, ಮಲ್ಲಣ್ಣ ಸುರಪುರ, ಈರಣ್ಣ ದೇಸಾಯಿ, ರಾಘವೇಂದ್ರ ಗೋಗಿ, ಸಿದ್ದಣ್ಣ ಕಟ್ಟಿಮನಿ ಮಕ್ಕಳು ಸೇರಿದಂತೆ ಇತರರು ಇದ್ದರು.

# ಸೋಮಣ್ಣ ಬೇವಿನಮರದ ಜಿಲ್ಲಾ ಪ್ರವಾಸ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಸೋಮಣ್ಣ ಬೇವಿನಮರದ ಅವರು ಏಪ್ರಿಲ್.11 ರಿಂದ 13 ರವರೆಗೆ ಬೀದರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿರುತ್ತಾರೆ.

ಏಪ್ರಿಲ್.11 ರಂದು ಬೆಳಿಗ್ಗೆ 10 ಗಂಟೆಗೆ ಬೀದರಗೆ ಆಗಮಿಸಿ ಸಂಜೆ 5 ಗಂಟೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಬೀದರ ಜಿಲ್ಲಾ ಘಟಕ ಇವರು ಆಯೋಜಿಸಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ “ಗಡಿ ಸಮಸ್ಯೆ” ಬಗ್ಗೆ ಸಂವಾದದಲ್ಲಿ ಭಾಗವಹಿಸಲಿದ್ದಾರೆ.

ಏಪ್ರಿಲ್.12 ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಇವರು ಆಯೋಜಿಸಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

# ವಿವಿಧ ತರಬೇತಿ ಪಡೆಯಲು ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಎಸ್.ಬಿ.ಐ. ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಕೆಳಕಂಡ ವಿವಿಧ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸಂಸ್ಥೆಯ ಎಸ್.ಬಿ.ಐ. ಆರ್‌ಸೆಟ್ ನಿರ್ದೇಶಕರು ತಿಳಿಸಿದ್ದಾರೆ.

ಏಪ್ರಿಲ್ 15 ರಿಂದ 28 ರವರೆಗೆ ಕೃಷಿ ಉದ್ಯಮಿ (ಕುರಿ ಮತ್ತು ಆಡು ಸಾಕಾಣಿಕೆ, ಹೈನುಗಾರಿಕೆ ಮತ್ತು ಎರೆಹುಳು ಗೊಬ್ಬರ ತಯಾರಿಕೆ) ತರಬೇತಿ ಹಾಗೂ ಏಪ್ರಿಲ್ 15 ರಿಂದ ಮೇ 15 ರವರೆಗೆ ಹೊಲಿಗೆ ತರಬೇತಿ (ಮಹಿಳೆಯರಿಗಾಗಿ) ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅರ್ಜಿ ಸಲ್ಲಿಕೆಗೆ 2026ರ ಏಪ್ರಿಲ್ 14 ರಂದು ಕೊನೆಯ ದಿನವಾಗಿದೆ.

ಈ ತರಬೇತಿ ಸಂದರ್ಭದಲ್ಲಿ ಉಚಿತ ಊಟ ಹಾಗೂ ವಸತಿ ಸೌಲಭ್ಯ ನೀಡಲಾಗುತ್ತದೆ. ವಯೋಮಿತಿ 18 ರಿಂದ 45 ವರ್ಷದೊಳಗಿನ ಬಿ.ಪಿ.ಎಲ್., ಅಂತ್ಯೋದಯ ರೇಷನ್, ಎಮ್‌ಜಿಎನ್‌ಆರ್‌ಇಜಿಎ ಕಾರ್ಡ್ ಹೊಂದಿದ ಕುಟುಂಬದ ನಿರುದ್ಯೋಗಿ ಅಭ್ಯರ್ಥಿಗಳು ಸಂಸ್ಥೆಯಿಂದ ನಿಗದಿತ ಅರ್ಜಿ ನಮೂನೆಯನ್ನು ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ ಮೇಲ್ಕಂಡ ಕೊನೆಯ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸಬೇಕು.

ಮತ್ತಿತರ ಹೆಚ್ಚಿನ ಮಾಹಿತಿಗಾಗಿ ತರಬೇತಿ ಸಂಸ್ಥೆಯನ್ನು ಹಾಗೂ ಮೊಬೈಲ್ ಸಂಖ್ಯೆ 9901694389, 9900135705, 7019939996, 9901098123 ಗಳಿಗೆ ಸಂಪರ್ಕಿಸಲು ಕೋರಲಾಗಿದೆ.

# ಪ್ರಾಯೋಜಕತ್ವ ಕಾರ್ಯಕ್ರಮ ಅನುಷ್ಠಾನ: ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಬಾಲನ್ಯಾಯ (ಮಕ್ಕಳ ಪಾಲನೆ ಮತ್ತು ರಕ್ಷಣೆ) ಕಾಯ್ದೆ 2015, ಸೆಕ್ಷನ್ (45) ರನ್ವಯ ಹಾಗೂ ಬಾಲನ್ಯಾಯ (ಮಕ್ಕಳ ಪಾಲನೆ & ರಕ್ಷಣೆ) ಮಾದರಿ ನಿಯಮಗಳು 2016ರ ನಿಯಮ (24)ರನ್ವಯ 2026–27ನೇ ಸಾಲಿನ ಪ್ರಾಯೋಜಕತ್ವ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲಾಗುತ್ತಿದ್ದು, ಇದಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಕಲಬುರಗಿ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು ತಿಳಿಸಿದ್ದಾರೆ.

ಕೇಂದ್ರ ಸರ್ಕಾರದ ಪ್ರಾಯೋಜಕತ್ವ ಕಾರ್ಯಕ್ರಮದ ಮಾರ್ಗಸೂಚಿ ಅನ್ವಯ ಮಕ್ಕಳನ್ನು ಕುಟುಂಬದ ವಾತಾವರಣದಲ್ಲಿ ಬೆಂಬಲ ನೀಡುವುದು ಪ್ರಾಯೋಜಕತ್ವ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. 10 ವರ್ಷ ಮೇಲ್ಪಟ್ಟ 18 ವರ್ಷದ ಒಳಗಿನ ಮಕ್ಕಳಿಗೆ ಪ್ರಾಯೋಜ–ಕತ್ವ ಯೋಜನೆಯು ಅನ್ವಯವಾಗಲಿದೆ. ಪ್ರತಿಯೊಂದು ಮಗುವು ಕುಟುಂಬದಲ್ಲಿ ಬೆಳೆಯುವುದು ಮಗುವಿನ ಹಕ್ಕು ಎಂಬುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಕುಟುಂಬದ ವಾತಾವರಣವನ್ನು ಉತ್ತಮಪಡಿಸುವ ಸಲುವಾಗಿ ಮಕ್ಕಳು ದುಡಿಮೆಗೆ ಹೋಗುವುದನ್ನು ತಪ್ಪಿಸಿ ಶಿಕ್ಷಣವನ್ನು ಮುಂದುವರೆಸುವುದನ್ನು ಉತ್ತೇಜಿಸಲು ಹಾಗೂ ವೈದ್ಯಕೀಯ, ಪೌಷ್ಠಿಕ ಆಹಾರ, ವೃತ್ತಿ ತರಬೇತಿ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಗಳಿಗೆ ಪೂರಕವಾಗಿ ಮಿಷನ್ ವಾತ್ಸಲ್ಯ ಯೋಜನೆಯ ಮಾರ್ಗಸೂಚಿಯನ್ವಯ ಆರ್ಥಿಕ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ನಿಗದಿತ ಅರ್ಜಿ ನಮೂನೆಯನ್ನು ಸರ್ಕಾರಿ ಬಾಲಕರ ಬಾಲಮಂದಿರ ಆವರಣ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಸೇಡಂ ರಸ್ತೆ, ಪ್ರಗತಿ ಕಾಲೋನಿ, ಕಲಬುರಗಿ ಕಚೇರಿಯಿಂದ ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲಾತಿಗಳೊಂದಿಗೆ 2026ರ ಏಪ್ರಿಲ್ 30 ರೊಳಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಪ್ರಗತಿ ಕಾಲೋನಿ, ಸೇಡಂ ರೋಡ, ಕಲಬುರಗಿ ಇವರಿಗೆ ಸಲ್ಲಿಸಬೇಕು.

ಮಕ್ಕಳನ್ನು ಗುರುತಿಸಲು ಇರುವ ಮಾನದಂಡಗಳು ಹಾಗೂ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ, ಕಲಬುರಗಿ ಕಚೇರಿಯನ್ನು ಹಾಗೂ ದೂರವಾಣಿ ಸಂಖ್ಯೆ 08472–243219ಗೆ ಸಂಪರ್ಕಿಸಲು ಕೋರಲಾಗಿದೆ.

# ಏ,12ಕ್ಕೆ ವಿದ್ಯುತ್ ವ್ಯತ್ಯಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ವ್ಯಾಪ್ತಿಯಲ್ಲಿ ಈ ಕೆಳಕಂಡ ಫೀಡರ್‌ಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ಏಪ್ರಿಲ್ 12ರಂದು ಭಾನುವಾರ ಬೆಳಿಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ನಿರ್ವಹಣಾ ಕಾರ್ಯಕೈಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಸಾರ್ವಜನಿಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ನಗರ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು (ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೌಲ್ಯಾಧಾರಿತ ಶಿಕ್ಷಣಕ್ಕೆ ಸಾಹಿತ್ಯವೇ ಬುನಾದಿ: ನಾಯಕ



• ಮಲ್ಲಮ್ಮ ನುಡಿ ವಾರ್ತೆ ಅಂಕೋಲಾ

ಶಿಕ್ಷಣವೆಂದರೆ ಜ್ಞಾನ, ಕೌಶಲ್ಯಗಳನ್ನು ಮುಂದಿನ ತಲೆಮಾರಿಗೆತಲುಪಿಸುವ ಸಂಪರ್ಕ ಸೇತುವೆಯಾಗಿದೆ. ಮೌಲ್ಯಾಧಾರಿತ ಶಿಕ್ಷಣಕ್ಕೆ ಸಾಹಿತ್ಯವೇ ಭದ್ರ ಬುನಾದಿ ಒದಗಿಸಿದರೆ ಆ ಶಿಕ್ಷಣ ಹೆಚ್ಚು ಅರ್ಥಪೂರ್ಣವಾಗುತ್ತದೆ.ಸಾಹಿತ್ಯದಓದು ಮೌಲ್ಯಾಧಾರಿತ ಶಿಕ್ಷಣಕ್ಕೆ ಪೂರಕವಾಗಿರುತ್ತದೆಯೆಂದುಕುಮಟಾದಡಯಟಿನ ನಿವೃತ್ತಉಪನಿರ್ದೇಶಕಎನ್. ಜಿ. ನಾಯಕ ಹೇಳಿದರು.

ಅಂಕೋಲಾ ಕ.ಸಾ.ಪ. ಘಟಕ ಹಾಗೂ ಕೆ.ಎಲ್.ಇ. ಸಂಸ್ಥೆಯ ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿ ಸಂಸ್ಥೆ ಏರ್ಪಡಿಸಿದ ಭಾಷಣ ಸ್ಪರ್ಧೆಯಕಾರ್ಯಕ್ರಮ ಉದ್ಘಾಟಿಸಿಅವರುಮಾತನಾಡಿದರು.

ಲೇಖಕ ಮಹಾಂತೇಶರೇವಡಿ ಮಾತನಾಡಿ, ವಿದ್ಯಾರ್ಥಿಗಳು ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು.ಓದುಅರಿವಿನ ಜೊತೆಗೆ ವಿವೇಕ ತರುತ್ತದೆ.ನಮ್ಮ ನಡಾವಳಿಕೆಯನ್ನು ಮೃದುವಾಗಿಸುತ್ತದೆ.ಸವಾಲುಗಳನ್ನು ಎದುರಿಸುವಗಟ್ಟಿತನವನ್ನು ಹುಟ್ಟಿಸುತ್ತದೆಯೆಂದರು.

ಪ್ರಾಚಾರ್ಯೆಸರೋಜಿನಿ ಹಾರವಾಡೇಕರ ಮಾತನಾಡಿ, ವಿದ್ಯಾರ್ಥಿಗಳು ಸಾಹಿತ್ಯದತ್ತ ಒಲವನ್ನು ಹೆಚ್ಚಾಗಿ ಬೆಳೆಸಿಕೊಳ್ಳಬೇಕೆಂದರು. ಕ.ಸಾ.ಪ. ಅಧ್ಯಕ್ಷ ಗೋಪಾಲಕೃಷ್ಣ ನಾಯಕಅಧ್ಯಕ್ಷತೆ ವಹಿಸಿ ಮಾತನಾಡಿ, ಯುವಜನತೆಯನ್ನುತಲುಪುವ ಕಾರ್ಯಕ್ರಮಗಳನ್ನು ಆಯೋಜಿಸಲು ಕ.ಸಾ.ಪ. ಹೆಚ್ಚಿನಆಧ್ಯತೆ ನೀಡುತ್ತಿದೆಎಂದರು. ತಿಮ್ಮಣ್ಣ ಭಟ್, ಜೆ.ಪ್ರೇಮಾನಂದಮಾತನಾಡಿದರು.

ನೇತ್ರಾವತಿ ವಂದಿಸಿದರು.ಪವಿತ್ರಾಗೌಡ ನಿರೂಪಿಸಿದರು. ಡಾ. ಪುಷ್ಪಾ ನಾಯಕ, ಉಪನ್ಯಾಸಕರಾದ ಲೋಕೇಶ, ಸಾಮ್ಯುವೆಲ್ ಉಪಸ್ಥಿತರಿದ್ದರು.ಭಾಷಣ ಸ್ಪರ್ಧೆಯಲ್ಲಿಭಾಗೀರಥಿಗೌಡ ಪ್ರಥಮ, ಮೇಘನಾ ಆಗೇರ ದ್ವಿತೀಯ, ಮಹೇಶ ಗೌಡತೃತೀಯಸ್ಥಾನ ಪಡೆದರು.

# ರೈತರು ಸಮುದಾಯ ಕೃಷಿ ಪದ್ಧತಿ ಅಳವಡಿಸಿಕೊಳ್ಳಿ: ಸಿದ್ರಾಮಯ್ಯ ಸ್ವಾಮಿ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಪ್ರತಿಯೊಬ್ಬ ರೈತರು ಸಮುದಾಯ ಕೃಷಿಪದ್ಧತಿಯನ್ನು ಅಳವಡಿಸಿಕೊಂಡಲ್ಲಿ ತಮ್ಮ ಆರ್ಥಿಕ ಮಟ್ಟ ಸುಧಾರಿಸುತ್ತದೆ ಎಂದು ಬೀದರ ತಾಲುಕ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಸಿದ್ರಾಮಯ್ಯಾ ಎಸ್.ಸ್ವಾಮಿ ತಿಳಿಸಿದರು.

ಅವರು ಶುಕ್ರವಾರ ಜಿಲ್ಲಾ ಪಂಚಾಯತ, ಕೃಷಿ ಇಲಾಖೆ ಬೀದರ ಸಹಯೋಗದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಬೀದರನಲ್ಲಿ ತಾಲ್ಲೂಕು ಮಟ್ಟದ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈತರು ಒಟ್ಟಾಗಿ ಸೇರಿ ಜಂಟಿ ನಿರ್ವಹಣೆ,ಹಂಚಿಕೆಯಸಂಪನ್ಮೂಲಗಳು ಮತ್ತು ಸಾಮೂಹಿಕ ಮಾರುಕಟ್ಟೆಯ ಮೂಲಕ ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಮಾದರಿಯಾಗಿದೆ. ಇದು ಸಾವಯವ ಕೃಷಿ ಮಿಶ್ರ ಬೇಸಾಯ ಮತ್ತು ಬೀಜ ಬ್ಯಾಂಕ್‌ಗಳಂತಹ ಸಾಂಪ್ರದಾಯಿಕ ವಿಧಾನಗಳನ್ನು ಬಳಸಿ, ಕಡಿಮೆ ಖರ್ಚಿನಲ್ಲಿ ಹೆಚ್ಚಿನ ಆದಾಯ ಗಳಿಸಲು ಮತ್ತು ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗಿದೆ ಎಂದರು.

2026–27ನೇ ಸಾಲಿನ ಮುಂಗಾರು ಹಂಗಾಮಿನಿಮದ ಈ ಹೊಸ ನಿಯಮ ಜಾರಿಗೆ ಬರಲಿದ್ದು, ರಸಗೊಬ್ಬರ ವಿತರಣೆಯಲ್ಲಿ ಗೊಬ್ಬರ ವಿತರಣೆಯಲ್ಲಿ ಪಾರದರ್ಶಕತೆ ತರಲು ಮತ್ತು ಕಾಳಸಂತೆಯಲ್ಲಿ ಗೊಬ್ಬರ ಮಾರಾಟವಾಗುವುದನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ. ರೈತರು ತಮ್ಮ ಜಮೀನಿನ ವಿಸ್ತೀರ್ಣ ಮತ್ತು ಬೆಳೆದ ಬೆಳೆಗೆ ಅನುಗುಣವಾಗಿ ಎಷ್ಟು ಪ್ರಮಾಣದ ಗೊಬ್ಬರ ಅಗತ್ಯವಿದೆಯೋ ಅಷ್ಟನ್ನು ಮಾತ್ರ ಕೆ–ಕಿಸಾನ್ ತಂತ್ರಾಂಶದ ಮೂಲಕ ವಿತರಿಸಲಾಗುವುದು ಎಂದು ತಿಳಿಸಿದರು.

ಪ್ರತಿಯೊಬ್ಬರೈತರುಕೆಂದ್ರಿಯಎಫ್.ಐ.ಡಿ ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕು, ಜಿಲ್ಲೆಯ ಕಬ್ಬು ಕಾರ್ಖನೆಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಕಾರ್ಖನೆಯು ತಕ್ಷಣವೇ ರೈತರ ಖಾತೆಗೆ ಹಣ ಪಾವತಿಸಬೇಕು, ರೈತರಿಗೆ ಪ್ರತಿ ಪಹಣಿಗೆ ಮುದ್ರಿಸಲು 05 ರೂ. ಹಾಗಿ ಕೃಷಿ ಇಲಾಖೆ ಹನಿ ನೀರಾವರಿಗೆ ಹೆಚ್ಚಿನ ಅನುದಾನ ಒದಗಿಸುವುದು, ನಮ್ಮ ಹೊಲ ನಮ್ಮ ದಾರಿ ಯೋಜನೆಯಡಿಯಲ್ಲಿ ಕಲ್ಯಾಣ ಕರ್ನಾಟಕ ಭಾಗ್ಯಕ್ಕೆ ವಿಶೇಷ ಅನುದಾನ ನೀಡುವುದು, ಕಾಡು ಪ್ರಾಣಿಗಳ ಕಾಟ ತಡೆಯಲು ಎಲ್ಲಾ ಹೊಲಗಳಿಗೆ ತಂತಿಬೇಲಿ ಅಳವಡಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಹಚ್ಚಿ, ದಯಾನಂದ ಸ್ವಾಮಿ, ಜಿಲ್ಲಾ ಪ್ರತಿ ನಿಧಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರಾದ ಮನ್ಮಥಸ್ವಾಮಿ, ವೈಜಿನಾಥ ಭುಯ್ಯಾ, ಮಹಾದೇವ ಸ್ವಾಮಿ, ಅಶೋಕ್ ಬಿರಾದಾರ, ನಂದಕುಮಾರ, ಶಂಕರ ಪಾಟೀಲ ಯತವಾಳ, ಮಹಾದೇವ ನಾಗೂರೆ, ಅಶೋಕ ಬಾಮಂದಿ, ಸಹಾಯಕ ಕೃಷಿ ನಿರ್ದೇಶಕರಾದ ಆರತಿ ಪಾಟೀಲ್, ಪಶು ಸಂಗೋಪನೆ ಇಲಾಖೆಯ ಸುನೀಲ ಕುಮಾರ ತಾಲ್ಲೂಕ ತಾಂತ್ರಿಕ ಅಧಿಕಾರಿ ಅರುಣಕುಮಾರ ಅಕ್ಕಣ್ಣಾ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸತೀಶಕುಮಾರ ಶೇಟಕಾರರವರು ತಮ್ಮ ವಂದನಾರ್ಪಣೆಯೊಂದಿಗೆ ಸಭೆಯನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಮುಕ್ತಾಯಗೊಳಿಸಿದರು.

# ಮಹಿಳಾ ದೌರ್ಜನ್ಯ ತಡೆಯಲು ಕಾನೂನು ವ್ಯವಸ್ಥೆ ಬಲಗೊಳ್ಳಬೇಕು: ಸಾಗರ ಖಂಡ್ರೆ

• ಮಲ್ಲಮ್ಮ ನುಡಿ ವಾರ್ತೆ, ಬೀದರ

ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಕಾನೂನು ವ್ಯವಸ್ಥೆ ಬಲಗೊಳ್ಳಬೇಕು ಮತ್ತು ಅಪರಾಧ ಸಾಬೀತಾಗಿ ಶಿಕ್ಷೆಯಾಗುವ ಪ್ರಮಾಣ ಹೆಚ್ಚಾಗಬೇಕು ಎಂದು ಸಂಸದ ಸಾಗರ ಖಂಡ್ರೆ ಹೇಳಿದರು.

ಅವರು ಶುಕ್ರವಾರ ನಗರದ ಡಾ. ಚನ್ನಬಸವ ಪಟ್ಟದೇವರ ರಂಗಮಂದಿರದಲ್ಲಿ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಜಿಲ್ಲಾ ಪಂಚಾಯತ್, ಬೀದರ ವತಿಯಿಂದ ಆಯೋಜಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಜೆ ನೀಡುವ ನಿರ್ಧಾರವನ್ನು ಕೈಗೊಂಡಿದೆ. ಎಲ್ಲರು ಸೇರಿ ಮಹಿಳೆಯರ ಅಭಿವೃದ್ಧಿಗೆ ಸೂಕ್ತ ಪ್ರೋತ್ಸಾಹ ನೀಡಬೇಕು. ಇಂದಿರಾ ಗಾಂಧಿಯವರಂತಹ ಶಕ್ತಿಯುತ ಮಹಿಳೆಯರನ್ನು ಆದರ್ಶವಾಗಿಟ್ಟುಕೊಂಡು ಮಹಿಳೆಯರು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.

ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಮಾತನಾಡಿ, ಮಹಿಳೆಯರಿಗೆ ಕೇವಲ ಒಂದು ದಿನ ಗೌರವ ನೀಡುವುದಕ್ಕಿಂತ, ಪ್ರತಿದಿನವೂ ಸಮಾನ ಅವಕಾಶ ಮತ್ತು ಗೌರವ ನೀಡುವ ವಾತಾವರಣ ನಿರ್ಮಾಣವಾಗಬೇಕು. ಮಹಿಳೆ ಮನೆಗೆಲಸದ ಜೊತೆಗೆ ದೇಶವನ್ನು ಆಳುವ ಶಕ್ತಿಯನ್ನು ಹೊಂದಿದ್ದಾಳೆ ಆದ್ದರಿಂದ ಮಹಿಳೆಯರು ತಮ್ಮ ಮಟ್ಟದ ಅಧಿಕಾರಿಗಳಾಗಿ ಮಹಿಳೆಯರನ್ನು ಗುರುತಿಸಿ ವೇದಿಕೆಯ ಮೇಲೆ ಗೌರವಿಸಿರುವುದು ಸಂತೋಷದ ವಿಷಯ. ಇಂತಹ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸಕ್ರಿಯ ಭಾಗವಹಿಸುವಿಕೆ ಅತ್ಯಗತ್ಯ. ಮಹಿಳೆಯರು ಕೇವಲ ಕಚೇರಿ ಕೆಲಸಗಳಲ್ಲದೆ, ಮನೆ, ಮಕ್ಕಳು ಮತ್ತು ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಇದು ಹೆಮ್ಮೆಯ ವಿಷಯ ಎಂದ ಅವರು ಏಪ್ರಿಲ್ 15 ರಿಂದ ಏಪ್ರಿಲ್ 30, 2026 ರ ಅವಧಿಯಲ್ಲಿ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ 2026 ಜನಗಣತಿಯ ಮಾಹಿತಿ ಸಂಗ್ರಹಿಸಲಿದ್ದಾರೆ. ಈ ಬಾರಿ ಸಾರ್ವಜನಿಕರು ಆನ್‌ಲೈನ್ ಲಿಂಕ್ ಮೂಲಕ ತಾವಾಗಿಯೇ ಮಾಹಿತಿಯನ್ನು ದಾಖಲಿಸಲು ಅವಕಾಶವಿದೆ ಆದ್ದರಿಂದ ಎಲ್ಲರು ಜನಗಣತಿಯಲ್ಲಿ ಭಾಗವಹಿಸಬೇಕೆಂದರು.



ಮಹಿಳೆಯರು ತಮ್ಮ ರಕ್ಷಣೆಗೆ ಆತ್ಮರಕ್ಷಣಾ ಕಲೆಗಳನ್ನು ಕಳೆಯುವ ಮೂಲಕ ಧೈರ್ಯದಿಂದ ಕೆಲಸ ಮಾಡಲು ಮುಂದಾಗಬೇಕು. ಗ್ರಾಮ ಪಂಚಾಯತ್‌ಗಳಲ್ಲಿ ಮಹಿಳೆಯರಿಗೆ ಶೇ. 50% ಮೀಸಲಾತಿಯಿದ್ದರೂ, ಹಲವೆಡೆ ಅವರ ಪರವಾಗಿ ಪುರುಷರೇ (ಪತಿ ಅಥವಾ ಸಂಬಂಧಿಕರು) ಆಡಳಿತ ನಡೆಸುತ್ತಿರುವುದು ಕಂಡುರುತ್ತಿದೆ. ಇದನ್ನು ಬದಲಿಸಿ ಮಹಿಳೆಯರು ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವಂತಾಗಬೇಕು. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ.33% ಮೀಸಲಾತಿ ನೀಡುವ ಮಸೂದೆಯಿಂದ ಮಹಿಳೆಯರ ಪ್ರಾತಿನಿಧ್ಯವನ್ನು ಹೆಚ್ಚಿಸಲಿದೆ ಎಂದರು.

ರಾಜ್ಯದಲ್ಲಿರುವ ನಮ್ಮ ಸರ್ಕಾರ ಭಾರತದಲ್ಲೇ ಮೊದಲ ಬಾರಿಗೆ ತಿಂಗಳಿಗೆ ಒಂದು ದಿನ ಋತುಚಕ್ರದ ಶಕ್ತಿಯನ್ನು ಅರೆತು ಕೆಲಸ ಮಾಡಿ ಉನ್ನತ ಹುದ್ದೆಗೆರಬೇಕು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಗಿರೀಶ್ ಬದೋಲೆ ಮಾತನಾಡಿ, ಗ್ರಾಮೀಣ ಭಾಗದ ಮಹಿಳೆಯರನ್ನು ಸ್ವಸಹಾಯ ಸಂಘಗಳ (ಖಊಉ) ಮೂಲಕ ಸಂಘಟಿಸಿ, ಅವರಿಗೆ ಉದ್ಯೋಗಾವಕಾಶ ಮತ್ತು ಆರ್ಥಿಕ ಸ್ವತಂತ್ರ ಒದಗಿಸುವಲ್ಲಿ ಈ ಅಭಿಯಾನ ಪ್ರಮುಖ ಪಾತ್ರ ವಹಿಸುತ್ತಿದೆ. ಮಹಿಳೆಯರು ಕೇವಲ ಸಾಂಪ್ರದಾಯಿಕ ಕೆಲಸಗಳಿಗೆ ಸೀಮಿತವಾಗದೆ, ಡಿಜಿಟಲ್ ಪಾವತಿಗಳು, ಆನ್‌ಲೈನ್ ಬ್ಯಾಂಕಿಂಗ್ ಮತ್ತು ಸ್ಮಾರ್ಟ್ಫೋನ್‌ಗಳ ಬಳಕೆಯನ್ನು ಕಲಿಯುವತ್ತ ಗಮನ ಹರಿಸಬೇಕು. ಜಿಲ್ಲೆಯಲ್ಲಿ ಸುಮಾರು 10 ಸಾವಿರ ಸ್ವಸಹಾಯ ಸಂಘಗಳು ಕಾರ್ಯನಿರ್ವಹಿಸುತ್ತಿವೆ ಎಂದರು.


ಜಿಲ್ಲಾ ಸಾಂಖ್ಯಿಕ ಅಧಿಕಾರಿ ಸುವರ್ಣ ಮಾತನಾಡಿ, ಜಿಲ್ಲಾ

ಕಾರ್ಯಕ್ರಮದಲ್ಲಿ ಅಕ್ಕ ಮಹಾದೇವಿ ಮಹಾವಿದ್ಯಾಲಯದ ಪ್ರಧ್ಯಪಕಿ ಧನಲಕ್ಷ್ಮೀ ಪಾಟೀಲ್ ವಿಶೇಷ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ಅತ್ಯುತ್ತಮ ಒಕ್ಕೂಟಗಳಿಗೆ ಹಾಗೂ ಸ್ವಸಹಾಯ ಗುಂಪುಗಳಿಗೆ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟ ಪುರಸ್ಕಾರ ಹಾಗೂ ಸ್ವ–ಸಹಾಯ ಗುಂಪು ಪುರಸ್ಕಾರ ಪ್ರಧಾನ ಮಾಡಲಾಯಿತು.

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ದೇವಿಕಾ. ಆರ್, ಚಿಟಗುಪ್ಪ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮೀ ಬಿರಾದಾರ್, ಜಿಲ್ಲಾ ಪಂಚಾಯತ್ ಸಹಾಯಕ ನಿರ್ದೇಶಕ ಶಿವಲೀಲಾ, ಯೋಜನಾ ನಿರ್ದೇಶಕ ಸೂರ್ಯಕಾಂತ ಬಿರಾದಾರ್ ಸೇರಿದಂತೆ ಸ್ವಸಹಾಯ ಸಂಘದ ಮಹಿಳೆಯರು ಉಪಸ್ಥಿತರಿದ್ದರು.

# ಪಿಯುಸಿ ವಿಜ್ಞಾನ ವಿಭಾಗದಲ್ಲಿ ಸಂಗೀತಾ ಮಾಣಿಕ್ ಡಿಸ್ಟಿಂಕ್ಷನ್

• ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರು



ಪಟ್ಟಣದ ಉಮಾ ಮಹೇಶ್ವರಿ ಪಿಯುಸಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡಿದ ಕುಮಾರಿ ಸಂಗೀತಾ ಆರ್ ಮಾಣಿಕ್ 600 ಕ್ಕೆ 506 ಅಂಕಗಳನ್ನು ಪಡೆಯುವ ಮೂಲಕ ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದಾರೆ.

ಪತ್ರಕರ್ತ ರಾಜೇಶ್ ಮಾಣಿಕ್ ರವರ ಹಿರಿಯ ಸುಪುತ್ರಿ ಯ ಸಾಧನೆಗೆ ಪಾಲಕರು ಸಂತೋಷ ವ್ಯಕ್ತಪಡಿಸಿದ್ದಾರೆ.

ಕಸಬಾ ಲಿಂಗಸಗೂರು ಗ್ರಾಮದಲ್ಲಿ ಇದ್ದುಕೊಂಡು ಶ್ರದ್ದೆಯಿಂದ ವಿದ್ಯಾಭ್ಯಾಸ ಮಾಡಿ 506 ಅಂಕಗಳು ತೆಗೆದುಕೊಂಡಿದ್ದು, ನಿತ್ಯ ಅಭ್ಯಾಸದಲ್ಲಿ ತೊಡಗಿರುವುದರಿಂದ ಸಾಧನೆ ಮಾಡಿದ್ದಾಳೆ ಎಂದು ತಂದೆ ಪತ್ರಕರ್ತರ ರಾಜೇಶ್ ಮಾಣಿಕ್ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ವಿದ್ಯಾರ್ಥಿನಿಯ ಸಾಧನೆಯಿಂದ ಕಾಲೇಜಿಗೂ ಹಾಗೂ ಕುಟುಂಬಕ್ಕೂ ಒಳ್ಳೆಯ ಕೀರ್ತಿ ತಂದಿದ್ದಾಳೆಂದು

ಉಮಾ ಮಹೇಶ್ವರಿ ಕಾಲೇಜಿನ ಅಡಳಿತಾಧಿಕಾರಿ ವಿನಯಕುಮಾರ ಗಣಚಾರಿ, ಕಾಲೇಜಿನ ಪ್ರಾಂಶಪಾಲರು ಜೆ.ವಿ.ಸುರೇಶ ಸೇರಿ ಹಲವರು ಅಭಿನಂದನೆ ತಿಳಿಸಿದ್ದಾರೆ.

# ಹುಮ್ನಾಬಾದ್ ಕ್ಷೇತ್ರದ ಪ್ರಗತಿಯ ಹರಿಕಾರ..!





ಬೀದರ್ ಜಿಲ್ಲೆಯ ಹುಮ್ನಾಬಾದ್ ಕ್ಷೇತ್ರ ಇಂದು ಇಷ್ಟು ಪ್ರಸಿದ್ಧಿ ಪಡೆಯಲು ಮುಖ್ಯ ಕಾರಣವೆಂದರೆ; ದಿ. ಮಾಜಿ ಮಂತ್ರಿ ಬಸವರಾಜ ಪಾಟೀಲ, ಮಾಜಿ ಮಂತ್ರಿ ರಾಜಶೇಖರ ಪಾಟೀಲ, ಎಂಎಲ್‌ಸಿಗಳಾದ ಡಾ.ಚಂದ್ರಶೇಖರ ಪಾಟೀಲ, ಮಾಜಿ ಜಿಪಂ

## ಕ್ಷೇತ್ರದ ಪುರೋಭಿವೃದ್ಧಿಗೆ ದೀಕ್ಷೆ ತೊಟ್ಟಿದ್ದ ಮಾಜಿ ಸಚಿವ ರಾಜಶೇಖರ್ ಪಾಟೀಲ್

ಅಭೀತೇಕ ಪಾಟೀಲ, ಸೋಮಶೇಖರ್ ಪಾಟೀಲ ಪರಿವಾರವೂ ಕಾರಣ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ವಿಶೇಷವಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಹುಮನಾಬಾದ್ ಈ ಪ್ರಾಂತ್ಯವೆಂದರೆ ತೀರ ಹಿಂದುಳಿದ ಪ್ರದೇಶ ಎಂಬ ಪ್ರತೀತಿ ಜನ ಜನತಿವಾಗಿತ್ತು. ಆದರೆ ರಾಜಶೇಖರ ಪಾಟೀಲರು ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಇಡೀ ಕ್ಷೇತ್ರವೇ ಪುರೋಭಿವೃದ್ಧಿಯ ಪಥದತ್ತ ದಾಪುಗಾಲು ಹಾಕಿತು.

ಮಂತ್ರಿಯಾದ ಕೂಡಲೇ ಅವರು ಇಡೀ ಕ್ಷೇತ್ರ ಸರ್ವಾಂಗೀಣ ಪ್ರಗತಿಗೆ ಪ್ರತಿಜ್ಞೆ ಮಾಡಿದ್ದರು. ಸರ್ಕಾರದ ಕಡೆಯಿಂದ ಶಕ್ತಿ ಮೀರಿ ಅನುದಾನ ತಂದರು. ಪ್ರತಿಯೊಂದು ಗ್ರಾಮಗಳಿಗೂ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದರು. ಹದಗೆಟ್ಟು ಹೋಗಿದ್ದ ಅದೆಷ್ಟೋ ರಸ್ತೆಗಳಿಗೆ ಡಾಂಬರು ಹಾಕಿಸಿ, ಸಾರಿಗೆ ಸೌಲಭ್ಯ ಕಲ್ಪಿಸಿದರು. ಮಳೆ ಬಂದರೆ ನೀರು ನಿಲ್ಲುತ್ತಿದ್ದ ಪ್ರದೇಶಗಳಲ್ಲಿ ಅಚ್ಚುಕಟ್ಟಾದ ಚರಂಡಿ ವ್ಯವಸ್ಥೆ ಕಲ್ಪಿಸಿದ್ದರು. ಮಕ್ಕಳು ವಿದ್ಯಾವಂತರಾದರೆ, ಇಡೀ ಕ್ಷೇತ್ರವೇ ಪ್ರಗತಿಯ ಪಥದತ್ತ ಸಾಗುತ್ತದೆ ಎಂಬ ದೂರ ದೃಷ್ಟಿ ಹೊಂದಿದ್ದ ಪಾಟೀಲರು, ತಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರತಿಯೊಂದು ಗ್ರಾಮಗಳಲ್ಲೂ ಉತ್ತಮ ಶಾಲೆಗಳನ್ನು ನಿರ್ಮಿಸಲು ಸಹಕರಿಸಿದ್ದರು. ಆಗತಾನೆ ಪುರೋಭಿವೃದ್ಧಿಯತ್ತ ಸಾಗುತ್ತಿದ್ದ ಕ್ಷೇತ್ರದ ತುಂಬ ವಿದ್ಯುತ್ ವ್ಯವಸ್ಥೆ ಕಲ್ಪಿಸಿ ಗ್ರಾಮಗಳಿಗೆ ಬೆಳಕು ಕೊಟ್ಟ ಭಾಗ್ಯದಾತರೆಂಬ ಬಿರಿದಿಗೂ ಪಾತ್ರರಾಗಿದ್ದರು.. ಹೀಗೆ ಹತ್ತಾರು ಅಭಿವೃದ್ಧಿಯ ಕಾರ್ಯಗಳನ್ನು ಕೈಗೆತ್ತಿಕೊಂಡು ಕ್ಷೇತ್ರವನ್ನು ಸರ್ವಾಂಗೀಣ ಪುರೋಭಿವೃದ್ಧಿಯತ್ತ ಸಾಗಿಸಿದ್ದರಿಂದಾಗಿ ಕ್ಷೇತ್ರದ ಜನರೂ ಸಂತೋಷದಿಂದ ಜೀವಿಸುತ್ತಿದ್ದಾರೆ. ವಿಶೇಷವಾಗಿ ಈ ಭಾಗದ ಕೈಗಾ–ರಿಕೆಗಳೂ ಸಮೃದ್ಧಿಯಾಗಿವೆ. ವಾಣಿಜ್ಯ ವಹಿವಾಟುಗಳೂ ಸುಸೂತ್ರವಾಗಿ ನಡೆಯುವುದಕ್ಕೆ ಇವರೇ ಕಾರಣ.

ಇಲ್ಲಿಗೆ ಅವರ ಸಾಮಾಜಿಕ ಕಾರ್ಯ ಅಪೂರ್ಣವಾಗಲಿಲ್ಲ. ತಮ್ಮ ಕ್ಷೇತ್ರವು ಅಧ್ಯಾತ್ಮ ಅಧಿದೈವವಾದ ಶ್ರೀ ವೀರಭದ್ರೇಶ್ವರ ದೇವಾಲಯದ ಪ್ರಗತಿಗೂ ತ್ರಿಕರಣಶುದ್ಧಿಯಿಂದ ದುಡಿದರು. ಪ್ರಸಿದ್ಧ ದೇವರ ದರ್ಶನ ಪಡೆಯಲು ಬರುವ ಭಕ್ತರ ಸಂಖ್ಯೆ ಯೂ ಹೆಚ್ಚಾದ ತೊಡಗಿತ್ತು. ಈ ಹಿನ್ನೆಲೆಯಲ್ಲಿ ದೇವಸ್ಥಾನದ ಅಭಿವೃದ್ಧಿಗೆ ದಿ. ಮಾಜಿ ಮಂತ್ರಿ ಬಸವರಾಜ ಪಾಟೀಲ, ಮಾಜಿ ಮಂತ್ರಿ ರಾಜಶೇಖರ ಪಾಟೀಲ, ಎಂಎಲ್‌ಸಿಗಳಾದ ಡಾ.ಚಂದ್ರಶೇಖರ ಪಾಟೀಲ, ಮಾಜಿ ಜಿಪಂ ಅಭೀತೇಕ ಪಾಟೀಲ, ಸೋಮಶೇಖರ್ ಪಾಟೀಲ ಪರಿವಾರವೂ ಕೂಡ ಟೊಂಕಕಟ್ಟಿ ಶ್ರಮಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ದೇವಸ್ಥಾನಕ್ಕೆ ಆರುಕೋಟಿಗೂ ಹೆಚ್ಚು ವೆಚ್ಚ ಮಾಡಿದ ಪಾಟೀಲ ಪರಿವಾರದ ಕೊಡುಗೆಯೂ ಅನನ್ಯವೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ. ವರ್ಷಕ್ಕೊಮ್ಮೆ ನಡೆಯುವ ಅದ್ದೂರಿ ಜಾತ್ರೆ ಯಶಸ್ವಿಯಾಗಿ ನಡೆಯಬೇಕಾದರೆ ಇದಕ್ಕೆ ಪಾಟೀಲರ ಪರಿಶ್ರಮವನ್ನು ಇಲ್ಲಿ ದಾಖಲಿಸಲೇ ಬೇಕು. ದೇವಸ್ಥಾನಕ್ಕೆ ಬರುವ ಲಕ್ಷಾಂತರ ಭಕ್ತರು ಇಲ್ಲಿನ ಮೂಲ ಸೌಕರ್ಯ ಕಂಡು ಮೆಚ್ಚುಗೆ ವ್ಯಕ್ತಪಡಿಸಿದ್ದೂ ಇದೆ. ಇದಕ್ಕೆಲ್ಲ ಕಾರಣ ಪಾಟೀಲ ಪರಿವಾರದ ಶ್ರಮ ಎಂದು ಶ್ಲಾಘಿಸಿದ್ದೂ ಉಂಟು. ದೇವರ ದರ್ಶನ ಕೈ ಬರುವ ಭಕ್ತ ಗಣಕ್ಕೆ ಕುಡಿಯುವ ನೀರಿನ ಸೌಲಭ್ಯ, ಅತ್ಯಾಧುನಿಕ ಹಾಗೂ ಅಚ್ಚುಕಟ್ಟಾದ ಶೌಚಾಲಯ ಸೌಕರ್ಯ ಎಂಥವರಿಗೂ ಇಷ್ಟವಾಗುತ್ತದೆ. ಅಂದರೆ; ದಕ್ಷ, ಪ್ರಾಮಾಣಿಕ ಹಾಗೂ ಸಮರ್ಥ ರಾಜಕೀಯ ನಾಯಕರೊಬ್ಬರು ಇಂತಹ ಕ್ಷೇತ್ರದಲ್ಲಿ ಇದ್ದರೆ ಪುರೋಭಿವ್ರದ್ಧಿಯ ಪವಾಡವನ್ನೇ ಮಾಡಬಹುದು ಎನ್ನುವುದಕ್ಕೆ ಮಾಜಿ ಮಂತ್ರಿ ರಾಜಶೇಖರ ಪಾಟೀಲರೇ ಸಾಕ್ಷಿ ಎಂದು ಖುದ್ದು ಕ್ಷೇತ್ರದ ಜನರೇ ಕೊಂಡಾಡುತ್ತಿದ್ದಾರೆ..!

### ಕ್ಷೇತ್ರದ ಜೊತೆ ಆಧ್ಯಾತ್ಮ ಕೇಂದ್ರ ವೀರಭದ್ರೇಶ್ವರ ದೇಗುಲ ಪ್ರಗತಿಗೆ ಶ್ರಮಿಸಿದ್ದ ದಿ.ಬಸವರಾಜ ಪಾಟೀಲರ ಕಾರ್ಯ ಸ್ಮರಣೀಯ

**ಮೂಲ ರೂಪದಲ್ಲಿದ್ದ ವೀರಭದ್ರೇಶ್ವರ ದೇವಸ್ಥಾನ ಇಂದಿನ ರೂಪಕ್ಕೆ ಬರಲು ಪ್ರಮುಖ ಕಾರಣವೆಂದರೆ, ದಿ.ಬಸವರಾಜ ಪಾಟೀಲರು. ಇವರ ದೂರ ದೃಷ್ಟಿಯಿಂದಾಗಿ ದೇವಸ್ಥಾನ ಅಭಿವೃದ್ಧಿಯ ಆಕಾರ ಪಡೆದಿದೆ. ದೇಗುಲದ ಪ್ರಗತಿಗಾಗಿಯೇ ಅವರು ಪಣ ತೊಟ್ಟಿದ್ದರು. ವಿವಿಧ ಸಂಸದರ ಹಾಗೂ ಶಾಸಕರ ಅನುದಾನ ಮಂಜೂರು ಮಾಡಿಸಿದ್ದರು. ದೇವಸ್ಥಾನದ ಅಭಿವೃದ್ಧಿಯಾದರೆ ಈ ಪ್ರದೇಶದ ಪ್ರಗತಿ ಎಂದು ನಂಬಿದ್ದ ಅವರು ಈ ಭಾಗದ ಅಭಿವೃದ್ಧಿ ಗಾಗಿ ತನು, ಮನ ತ್ರಿಕರಣ ಶುದ್ಧಿಯಿಂದ ಶ್ರಮಿಸಿದ್ದು ಇಲ್ಲಿ ಸ್ಮರಣೀಯ ವಾಗಿದೆ. ಅವರ ಸಾಕಷ್ಟು ಶ್ರಮದ ಫಲದಿಂದಾಗಿ ದೇಗುಲ ಪ್ರಗತಿಯ ಪಥದತ್ತ ಸಾಗಿದೆ. ಮಂಟಪಕ್ಕೆ ದಿ.ಬಸವರಾಜ ಪಾಟೀಲ ಕಲ್ಯಾಣ ಮಂಟಪ ಎಂದ ನಾಮಕರಣ ಮಾಡಿದ್ದು ಔಚಿತ್ಯ ಪೂರ್ಣವಾಗಿದೆ ಎಂದು ಕ್ಷೇತ್ರದ ಭಕ್ತಾದಿಗಳ ಅಭಿಮತವಾಗಿದೆ.**




# ಪತ್ರಕರ್ತರ ಹಿತ ಕಾಪಾಡಿದ ಮಾಜಿ ಸಚಿವ ಪಾಟೀಲ



**ಬೀದರ್:** ಮಾಜಿ ಸಚಿವ ರಾಜಶೇಖರ ಪಾಟೀಲ ಅವರು ಸದಾ ಸಮಾಜಮುಖಿ ರಾಜಕಾರಣದ ಮೂಲಕ ಗುರುತಿಸಿಕೊಂಡ ನಾಯಕರು. ವಿಶೇಷವಾಗಿ ಪತ್ರಕರ್ತರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಅವರು ತೋರಿದ ಕಾಳಜಿ ಗಮನಾರ್ಹವಾಗಿದೆ. ಪತ್ರಕರ್ತರು ಸಮಾಜದ ನಾಲ್ಕನೇ ಸ್ತಂಭವಾಗಿದ್ದು, ಅವರ ಸಮಸ್ಯೆಗಳು ಮತ್ತು ಹಕ್ಕುಗಳಿಗೆ ಸ್ಪಂದಿಸುವುದು ಸರ್ಕಾರದ ಕರ್ತವ್ಯವೆಂದು ಪಾಟೀಲ ಅವರು ಅನೇಕ ಬಾರಿ ಸ್ಪಷ್ಟಪಡಿಸಿದ್ದಾರೆ. ಪತ್ರಕರ್ತರ ಮೇಲೆ ಆಗುವ ದೌರ್ಜನ್ಯ, ಒತ್ತಡ ಹಾಗೂ ಅನ್ಯಾಯಗಳ ವಿರುದ್ಧ ಅವರು ಧ್ವನಿ ಎತ್ತಿದವರು. ವಿವಿಧ ಸಂದರ್ಭಗಳಲ್ಲಿ ಪತ್ರಕರ್ತರ ಸುರಕ್ಷತೆ, ಕಲ್ಯಾಣ ಮತ್ತು ವೃತ್ತಿ ಸ್ವಾತಂತ್ರ್ಯವನ್ನು ರಕ್ಷಿಸಲು ಕ್ರಮ ಕೈಗೊಂಡಿದ್ದಾರೆ. ಪತ್ರಕರ್ತರಿಗೆ ಅಗತ್ಯ ಸೌಲಭ್ಯಗಳು, ಮಾನ್ಯತೆ ಮತ್ತು ಗೌರವ ದೊರಕಬೇಕು ಎಂಬುದು ಅವರ ಧ್ಯೇಯವಾಗಿತ್ತು. ಪತ್ರಕರ್ತರ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿ, ಅವರ ಬೇಡಿಕೆಗಳಿಗೆ ಸ್ಪಂದಿಸುವಲ್ಲಿ ಅವರು ಮುಂಚೂಣಿಯಲ್ಲಿದ್ದರು. ಇದರಿಂದ ಪತ್ರಕರ್ತರ ಸಮುದಾಯದಲ್ಲಿ ಅವರಿಗೆ ವಿಶೇಷ ಸ್ಥಾನಮಾನ ದೊರೆತಿದೆ.

# ಡೈಮಂಡ್ ದ್ವಿತೀಯ ಪಿ.ಯು.ಸಿ ಅದ್ಭುತ ಫಲಿತಾಂಶ

- **ಪರಶುರಾಮ ಕರಣಂ ಭಾಲ್ಕಿ**

ಡೈಮಂಡ್ ಗ್ರುಪ್ ಆಫ್ ಇನ್ಸಿಟ್ಯೂಟ್‌ನ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿಗಳು ವಾರ್ಷಿಕ ಪರೀಕ್ಷೆಯಲ್ಲಿ ಅಪ್ರತಿಮ ಸಾಧನೆಗೈದು ಕಲ್ಯಾಣ ಕರ್ನಾಟಕದಲ್ಲಿಯೇ ಅಗ್ರಗಣ್ಯರೆನಿಸಿದ್ದಾರೆ.

ತಾಲೂಕಿನ ಹಲವಾರು ವಿದ್ಯಾರ್ಥಿಗಳು ಗ್ರಾಮೀಣ ಭಾಗದಲ್ಲಿದ್ದು ಕನ್ನಡ, ಮರಾಠಿ, ಉರ್ದು ಮತ್ತು ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಿದರೂ ಕೂಡ ಅತ್ಯುತ್ತಮ ಫಲಿತಾಂಶವನ್ನು ತಂದುಕೊಟ್ಟಿದ್ದಾರೆ. ಒಟ್ಟು 628 ವಿದ್ಯಾರ್ಥಿಗಳು ಅಗ್ರಶೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

**ಕಾಲೇಜಿನ ವಿಷಯವಾರು ಫಲಿತಾಂಶದ ವಿವರ:**

ಭೌತಶಾಸ್ತ್ರ 8, ರಸಾಯನಶಾಸ್ತ್ರ 2, ಗಣಿತ 279, ಜೀವಶಾಸ್ತ್ರ 4, ಕಂಪ್ಯೂಟರ್ ಸೈನ್ಸ್ 12, ಕನ್ನಡ 10, ಹಿಂದಿ 2 ವಿದ್ಯಾರ್ಥಿಗಳು 100ಕ್ಕೆ 100 ಅಂಕಗಳನ್ನು ಪಡೆದಿದ್ದಾರೆ.

**ಕಾಲೇಜಿನವಿದ್ಯಾರ್ಥಿಗಳಫಲಿತಾಂಶದವಿವರಕೆಳಗಿನಂತಿದೆ:**



ಆನಂದ ಪ್ರಭು ಮತ್ತು ಆದಿತಿ ಬಲವಾನ 600ಕ್ಕೆ 587 (97.83%), ರೇವಣಪ್ಪ ಹಾವಗಿರಾವ, ಅಮರ ರಾಮ 586 (97.66%), ಸುಮೀತ ಸುಭಾಷ 584 (97.33%) ಪಡೆದು ಕಾಲೇಜಿನ ಕೀರ್ತಿ ಪತಾಕೆಯನ್ನು ಎತ್ತರಕ್ಕೆ ಹಾರಿಸಿದ್ದಾರೆ.

ಲಕ್ಷ್ಮಿ ಬಾಯಿ ಗುಂಡೆರಾವ 97, ಅನುಷ್ಕಾ ಸಹದೇವ 96.83, ರೆಡ್ಡಿ ಅರ್ಚನಾ ವಿಠ್ಠಲ 96.80, ಪ್ರಿಯಾ ಬಾಲಾಜಿ 96.67, ಶ್ರೀಕಾಂತ ಸಿದ್ದಪ್ಪಾ 96.66, ಪವನ ಮಡಿವಾಳಪ್ಪಾ ಮತ್ತು ಕೀರ್ತಿ ನಾಗನಾಥ ಬಿರಾದಾರ 96.5, ಐಶ್ವರ್ಯ ಬಸವರಾಜ 96.33, ಅನಿಕೇತ ರಮೇಶ ಮತ್ತು ಪ್ರೀತಿ ಚಂದ್ರಕಾಂತ 96.16, ವರ್ಷಾ ಅನಿಲಕುಮಾರ 96.00, ಅಂಜಲಿ ಈರಣ್ಣ ಮತ್ತು ವೈಷ್ಣವಿ ರತನ, ಕಿರಣ ರಾಜಪ್ಪಾ, ಐಶ್ವರ್ಯ ವಿಜಯಕುಮಾರ ಮತ್ತು ಕಿರಣ ಸುನಿಲ 95.83, ಸಿದ್ದು ಶಿವರಾಜ, ಮಲ್ಲಿಕಾರ್ಜುನ ಶಂಕರ, ರುದ್ರಾಣಿ ದೀಪಕ ಜಾಧವ ಮತ್ತು ಪೃಥ್ವಿರಾಜ ಸಂಜೀವಕುಮಾರ 95.67, ವೆಂಕಟೇಶ ವಿದ್ಯಾಪ್ರಕಾಶ 95.66, ಕಾರ್ತಿಕ ವಿಜಯಕುಮಾರ 95.60, ಚೈತನ್ಯಾ ಅಂಕುಶ ಮತ್ತು ಆದಿತ್ಯ ದತ್ತಾತ್ರಿ 95.50, ಅಂಜಲಿ ವಿಠ್ಠಲ, ಪೂಜಾ ಕಾಶಿನಾಥ, ಶುಭಾಂಗಿ ತುಳಸಿರಾಮ, ರಾಧಾ ಜಿಲಾಲ ಮತ್ತು ಕಪಿಲ ರಾಜಕುಮಾರ 95.33, ಗಣೇಶ ಭೀಮರಾವ, ಸುನೀಲ ಗುರುನಾಥ, ತನುಜಾ ಮತ್ತು ಸುಜಲ ವೀರಪ್ಪಾ 95.17, ಪವನ ಬಸವಲಿಂಗಪ್ಪ ಮತ್ತು ರೇಣುಕಾ ಬಲವಂತ 95.16, ರಸ್ನಾ ಮಹೆರೀನ ರೈಸ ಖಾನ, ಅವಿನಾಶ ಕಾಶಿನಾಥ, ಸಂಜುಕುಮಾರ ಮತ್ತು ಸಾವಿತ್ರಿ ಸೂರ್ಯಕಾಂತ 95.00, ವಿಶಾಲ ಜಗನ್ನಾಥರಾವ 94.83, ಪಾಂಡುರಂಗ ಗೋವಿಂದ, ಸ್ವಾತಿ ರಾಜಕುಮಾರ ಮತ್ತು ಅಲ್ಮಾಸ ಫಾತಿಮಾ ಶೇಖ್ ತಾಜೋದ್ದೀನ್ 94.67, ಸುಪ್ರಿಯಾ ಗೋಪಾಲ, ಶ್ರೀಶೈಲ ಅನಿಲ, ನಾಗೇಶ್ವರಿ ಶಾಲಿವಾನ, ಕಿರಣಕುಮಾರ ಮಲ್ಲಪ್ಪ ಮತ್ತು ಪಲ್ಲವಿ ಶಂಕರಯ್ಯಾ 94.5, ಸುಮಿತ ಸಂತೋಷ 94.33 ಮುಂತಾದವರು. ಈ ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷರಾದ ಮಸ್ತಾನವಲಿ, ಕಾರ್ಯದರ್ಶಿಗಳಾದ ವೈ.ಮಾಧವರಾವ, ಅಶ್ವಿನ ಭೋಸ್ಲೆ, ಗಿರೀಶ ಭಂಡಾರಿ, ಮಂಜುನಾಥ ಜೋಳದಾಪಕೆ, ಜ್ಞಾನೇಶ್ವರ ಬಿರಾದಾರ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ವಿದ್ಯಾರ್ಥಿಗಳಿಗೆ ಮತ್ತು ಪಾಲಕರಿಗೆ ಅಭಿನಂದನೆಯನ್ನು ಸಲ್ಲಿಸಿದ್ದಾರೆ.

# ಶಿವಶರಣರ ಕಾಯಕ ತತ್ತ್ವ ಹಾಗೂ ಸೂಫಿಗಳ ಹಲಾಲ್‌ನ ಮಹತ್ವ



**ಧರ್ಮ–ಮರ್ಮ**

- ಡಾ.ಎಂ.ಮಹ್ಮದ್ ಬಾಷಗೂಳ್ಯಂ

ಪ್ರಧಾನ ಸಂಪಾದಕ, ಬೆಂಗಳೂರು

ಈ ಎರಡೂ ಒಂದೇ ಅರ್ಥವನ್ನು ಕೊಡುತ್ತವೆ. ಇವೆರಡರ ಕ್ರಿಯೆ, ಕಲ್ಪನೆ ಒಂದೇಯಾಗಿದೆ. ಆದರೂ ಕಾಯಕ ತತ್ವವೂ ಗಾಂಭೀರ್ಯದೆಡೆಗೆ ನಮ್ಮನ್ನು ನಡೆಸಿಕೊಂಡು ಸಾಗಲು ಸಹಕಾರಿ. ಕಾಯಕದಲ್ಲಿಯೇ ಶರಣರು ಕೈಲಾಸವನ್ನು ಕಂಡಿದ್ದು, ಬಸವಣ್ಣನವರು ಕೂಡ ಕಾಯಕವೇ ಕೈಲಾಸ ಎಂದಿದ್ದನ್ನು ಇಲ್ಲಿ ಸ್ಮರಿಸಬಹುದು. ಸೂಫಿಗಳು ಕಟ್ಟುನಿಟ್ಟಿನಿಂದ ಪಾಲಿಸುವ ಹಲಾಲ್ ತತ್ವವು ಪವಿತ್ರ ಖುರಾನ್ ಆಧಾರಿತ. ಕುರಾನಿನ ಎರಡನೇ ಅಧ್ಯಾಯದ 168ನೇ ವಚನ ಶುದ್ಧ ವಸ್ತುಗಳನ್ನು ತಿನ್ನುವ ಆಜ್ಞೆಯನ್ನು ತಿಳಿಸುತ್ತದೆ. ಎರಡನೇ ಅಧ್ಯಾಯದ 172ನೇ ವಚನವು 'ಓ ಸತ್ಯ ವಿಶ್ವಾಸಿಗಳೇ, ನೀವು ನಿಜವಾಗಿಯೂ ಅಲ್ಲಾಹ್‌ನ ದಾಸ್ಯ ಆರಾಧನೆಯನ್ನೇ ಮಾಡುವವರಾದರೆ, ನಾವು ನಿಮಗೆ ಒದಗಿಸಿರುವ ಶುದ್ಧವಸ್ತುಗಳನ್ನು ನಿರಾತಂಕವಾಗಿ ಸೇವಿಸಿ. ಅಲ್ಲಾಹ್‌ನಿಗೆ ಕೃತಜ್ಞತೆ ಸಲ್ಲಿಸಿರಿ.' ಎಂದು ವಿವರಿಸುತ್ತದೆ. ಇನ್ನೊಂದು ಅಧ್ಯಾಯದಲ್ಲಿ, ನೀವು ನಿಮ್ಮ ಸಂಪತ್ತನ್ನು ಪರಸ್ಪರ ಅನುಚಿತ ರೀತಿಯಿಂದ ಕಬಳಿಸಬಾರದು. ನಿಮಗೆ ಇತರರ ಸಂಪತ್ತಿನ ಒಂದಂಶವನ್ನು ಉದ್ದೇಶ ಪೂರ್ವಕವಾಗಿ ಆಕ್ರಮರೂಪದಿಂದ ಕಬಳಿಸುವ ಸಂದರ್ಭ ಸಿಗುವಂತೆ ಅವುಗಳನ್ನು ಅಧಿಕಾರಿಗಳ ಮುಂದೆ ಸಮರ್ಪಿಸಬಾರದು, ಎನ್ನುತ್ತದೆ. ದುಡಿಯದೆ ಸಿಗುವ ಸಂಪತ್ತು ಅನ್ಯರಿಗೆ ಸೇರಿದ್ದು ಎಂದು ನಿಮಗೆ ಚೆನ್ನಾಗಿ ತಿಳಿದಿರುವಾಗ ಅವನ ಬಳಿ ತನ್ನ ಸೊತ್ತಿನ ಬಗ್ಗೆ ಯಾವುದೇ ಅಧಿಕಾರವಿಲ್ಲ. ಹೇಗಾದರೂ ಮಾಡಿ ಅದನ್ನು ಕಬಳಿಸಲು ನಿಮಗೆ ಸಾಧ್ಯವಿದೆ ಎಂಬ ಕಾರಣಕ್ಕಾಗಿ ಅದರ ಮೊಕದ್ದಮೆಯನ್ನು ನ್ಯಾಯಾಲಯಕ್ಕೆ ಕೊಂಡೊಯ್ಯದಿರಿ. ನ್ಯಾಯಾಧೀಶರು ಮೊಕದ್ದಮೆಯ ವಿವರಗಳನ್ನು ನೋಡಿ ಸಂಪತ್ತನ್ನು ನಿಮಗೆ ಒದಗಿಸಲೂಬಹುದು. ಆದರೆ ಅದೆಂದೂ ನಿಮ್ಮ ನ್ಯಾಯ ಸಮ್ಮತ ಸೊತ್ತಾಗದು. ಸ್ವತಃ ದುಡಿಯದೆ ಪರರ ದುಡುಮೆಯಿಂದ ಬಂದುದನ್ನು ಉಣ್ಣುವುದು ಹರಾಮ್ ಎನ್ನುತ್ತದೆ ಕುರಾನ್. ಹರಾಮ್ ಎಂದರೆ ನಿಷೇಧಿತ ಗಳಿಕೆ, ನಿಷೇಧಿತ ಆಹಾರ. ಒಟ್ಟಾರೆಯ ತಾತ್ಪರ್ಯ; ಶರಣರ ಪ್ರಕಾರ, ಕಾಯಕ ಮಾಡಿ ಉಣ್ಣಬೇಕು. ಶ್ರಮದಿಂದಲೇ ಶ್ರೇಷ್ಠ ಜೀವನ ಸಾಧ್ಯ. ಅನ್ಯರ ಸಂಪತ್ತು ನ್ಯಾಯೋಚಿತವಲ್ಲ. ಸೂಫಿಗಳ ಹಾಲಾಲ್ ತತ್ವವೂ ಇದಕ್ಕೆ ಪೂರಕ.

ಸೂಫಿಗಳು ಸತ್ಯ, ಪ್ರಾಮಾಣಿಕ ದುಡುಮೆಗೆ ಒತ್ತು ನೀಡುತ್ತಾರೆ. ಪರಿಶುದ್ಧ ಆಹಾರವನ್ನೇ ಸೇವಿಸುತ್ತಾರೆ. ದೇವಮಾರ್ಗದಲ್ಲಿ ಖರ್ಚು ಮಾಡುವುದನ್ನು ಇನ್‌ಫಾಕ್ ಎಂದು ಕರೆಯುತ್ತಾರೆ. ಧಾರ್ಮಿಕ ವ್ಯವಸ್ಥೆಯಲ್ಲಿ ದಾನಕ್ಕೆ ಮಹತ್ವ ಇದೆ. ಹಲಾಲ್, ಝುಕಾತ್ ಮತ್ತು ಇನ್‌ಫಾಕಗಳು ಕಾಯಕ, ದಾಸೋಹದ ಕಲ್ಪನೆಗೆ ಇಂಬು ನೀಡುತ್ತವೆ. ದುಡಿಯದೇ ಬಂದ ಸಂಪಾದನೆ ಶಿವಶರಣರ ದೃಷ್ಟಿಯಲ್ಲೂ ಪರಮ ಅಪರಾಧ. ಶಿವಶರಣರ




ಕಲ್ಪನೆಯ ಶ್ರೇಷ್ಠ ಕಾಯಕದ ಧ್ವನಿ ಸೃಷ್ಟಿ ಇರುವವರೆಗೂ ಸಾಕ್ಷಿಯಾಗಿ ನಿಲ್ಲುತ್ತದೆ. ಕಾಯಕದ ಗಾಂಭೀರ್ಯವನ್ನು ಶಿವಶರಣರ ವಚನಗಳಿಂದಲೇ ಅರಿಯಬೇಕು.

ಹೊತ್ತಾರೆ ಎದ್ದು ಕಣ್ಣ ಹೊಸೆಯುತ್ತ, ಎನ್ನ ಒಡಲಿಂಗೆ, ಎನ್ನೊಡವೆಗೆ ಎನ್ನ ಮಡದಿ, ಮಕ್ಕಳಿಗೆಂದು ಕುದಿದೆನಾದರೆ ಎನ್ನ ಮನಕ್ಕೆ ಮನವೇ ಸಾಕ್ಷಿ, ಸಲೆ ಕೈ ಕೂಲಿಯ ಮಾಡಿಯಾದರೆಯೂ ನಿಮ್ಮ ನಿಲುವಿಂಗೆ ಕುದಿವೆನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದರೆ, ತಲೆ ದಂಡ ಕೂಡಲ ಸಂಗಮದೇವ, ಕಾಯಕದ ಪ್ರಾಪ್ತಿ ಕೇವಲ ಮಡದಿ ಮಕ್ಕಳನ್ನು ಸಲುವಲಿಕ್ಕೆ ಮಾತ್ರವಲ್ಲ, ದೀನ ದರಿದ್ರರಿಗೆ ಮತ್ತು ಗುರುಲಿಂಗ ಜಂಗಮಕ್ಕೆ ರ್ಪಿಸುವ ಸತ್ಕಾರ್ಯಗಳಲ್ಲಿ ತೊಡಗಿಸುತ್ತಾರೆ. ಶಿವಶರಣರ ಕಾಯಕದಲ್ಲೂ ಸೂಫಿಗಳ ಹಲಾಲತತ್ವದಲ್ಲೂ ಸಾಮಿಪ್ಯವಿದೆ. ಬೆಳಗ್ಗೆದ್ದು ಹೊಟ್ಟೆ ಪಾಡಿಗಾಗಿ ಎಲ್ಲರೂ ಬಡಿದಾಡುವುದು, ಪಕ್ಷಿಗಳು ಕಾಳು, ಹುಳುಗಳ ಹುಡುಕಾಟದಲ್ಲಿ ತೊಡಗುವುದು, ದನಗಳು, ಮೇಯಲು ಹುಲ್ಲು ಗಾವಲು ಹುಡುಕುವುದು ಸಹಜ ಗುಣ. ಕೇವಲ ಹೆಂಡರು ಮಕ್ಕಳಿಗಾಗಿ ದುಡಿದು ಶರಣರ ಗುಣವಲ್ಲ, ತನು ಬಳಲಿಸಿ, ಕಾಯಕರಗಿಸಿ ಬಂದ ಫಲವು ಗುರುಲಿಂಗ ಜಂಗಮಕ್ಕೆ ಅರ್ಪಿತವಾಗಿರಬೇಕು. ಅದು ಇಂಥದೇ ದುಡುಮೆಯಂತಲ್ಲ ಹೊಲೆಯರ ಮನೆಯ ಕೈಗೂಲಿಯಾದರೂ ಸೈ ಜಂಗಮ ದಾಸೋಹಕ್ಕರ್ಪಿತವಾಗಬೇಕು. ಜೇಡರದಾಸಿಮಯ್ಯನ ಹಿಂದೆ ದೊಡ್ಡ ಶಿಷ್ಯರ ಬಳಗ ಮತ್ತು ಮಠಗಳನ್ನು ಆಶ್ರಮಗಳನ್ನು ಸ್ಥಾಪಿಸಿಗೊಂಡಿದ್ದ, ಮೇಲಾಗಿ ಜಯಸಿಂಹ, ದುಗ್ಗಳೆಯರಂಥ ಅರಸು ದಂಪತಿಗಳು ಆತನ ಶಿಷ್ಯತ್ವವನ್ನು ವಹಿಸಿಕೊಂಡಿರುವುದು ಇತಿಹಾಸ. ಶಿಷ್ಯ ಕೋಟಿಯಲ್ಲಿ ಮೆರೆಯುತ್ತ ಉಂಡು ತಿಂದು ಹಾಯಾಗಿರಬಹುದಾಗಿತ್ತು. ದಾಸಿ ಮಯ್ಯ ಹಾಗೆ ಮಾಡಲಿಲ್ಲ. ನೇಯ್ಗೆಯ ಕಾಯಕವನ್ನು ಕೈಗೊಂಡ ಈ ಕಾಯಕ ಕೇವಲ ಮಡದಿ ಮಕ್ಕಳನ್ನು ಪೋಷಿಸಲಿಲ್ಲ. ಜನತೆ ಜಂಗಮ ಜನಾರ್ಧನರನ್ನು ಸಂತೈಸಲಿಕ್ಕೆ, ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ನಿನ್ನದು ನಿನಗರ್ಪಿತ ದಾಸಿಮಾರ್ಯನ ಕಾಯಕ ಲಿಂಗಕ್ಕೆ ಜಂಗಮಕ್ಕೆ, ಎನ್ನುವ ಸಾಲು ಕಾಯಕ ಹಾಗೂ ದಾಸೋಹದ ಸ್ಪಷ್ಟ ಕಲ್ಪನೆಗೆ ಅಕರ ಒದಗಿಸುತ್ತವೆ. ಶಿವಜ್ಞಾನ ಸಂಪನ್ನನೇ ಜಂಗಮನು, ಸಾಕ್ಷಾತ್ ಶಿವಸ್ವರೂಪಿ. ಶಿವಯೋಗಿಗೆ ಭಿಕ್ಷೆಯನ್ನು ನೀಡುವುದರಿಂದ ಫಲದೊರಕುವುದು, ಶಿವಯೋಗಿಯು ತೃಪ್ತನಾದರೆ ಶಿವನು ತೃಪ್ತನಾಗುವನು. ಶಿವನು ತೃಪ್ತಿಯಿಂದ ಶಿವಸ್ವರೂಪವಾದ ಚರಚರಾತ್ಮಕ ಜಗತ್ತು ತೃಪ್ತಿಯನ್ನು ಹೊಂದುವುದು ಎಂದಾದರೆ, ಸೂಫಿಗಳ ಕಾಕತತ್ವವು ಕೂಡ ಕಟ್ಟುನಿಟ್ಟಿನಿಂದ ಪಾಲಿಸುವ ಕುರಾನ್ ಆಧಾರಿತ ವಾದ ಹಲಾಲ್ ಆಕ್ರಮ ಸಂಪದಾನೆಯನ್ನು ನಿಷೇಧಿಸುತ್ತದೆ. ಸತ್ಯ ಮತ್ತು ಶುದ್ಧ, ಪ್ರಾಮಾಣಿಕವಾದ ಸಂಪತ್ತನ್ನು ಝುಖಾತ್(ದಾನ), ಇನ್‌ಫಾಕ್‌ಗಳಂಥ ಸತ್ಕಾರ್ಯಗಳಲ್ಲಿ ವಿನಿಯೋಗಿಸಿಕೊಳ್ಳುವುದನ್ನು ಪ್ರೇರೇಪಿಸುತ್ತದೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)